ಈವತ್ತು ಸಂಘಟಿತರಾಗಿದ್ದಾರೆ. ಆದ್ದರಿಂದ ರೈತರ ಡಿಮ್ಯಾಂಡ್ ಏನು ಇದೆ ಅದನ್ನು ಒಪ್ಪಿದ್ದೇವೆಂದು ತಾವು ಹೇಳಬೇಕು. ಅವರು ಇಂದು ಜಾಗೃತರಾಗಿದ್ದಾರೆ. ಅವರಲ್ಲಿ ದೊಡ್ಡ ಶಕ್ತಿ ಇದೆ, ಹಿಂದೆ ೯೦ ಭಾಗದ ಜನರು ರೈತರು ಏನು ಇದ್ದರು ಅವರು ವಿಧಿಯಿಲ್ಲದೆ ಬೀದಿಗೆ ಇಳಿಯದೆ ಸುಮ್ಮನೆ ಕುಳಿತ್ತಿದ್ದರು. ಆದರೆ ಈವತ್ತು ಅವರು ಜಾಗೃತರಾಗಿದ್ದಾರೆ. ಅವರು ಕೇಳುತ್ತಿರುವುದು ಭಿಕ್ಷೆಯಲ್ಲವೆಂದು ತಾವು ತಿಳಿದುಕೊಳ್ಳಬೇಕು.

ಮುಖ್ಯಮಂತ್ರಿಯವರ ಹೇಳಿಕೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸುಮಾರು ೫ ಗಂಟೆಗಳಿಗೂ ಹೆಚ್ಚು ಕಾಲ ಕಳೆದ ನಾಲ್ಕು ದಿವಸಗಳಿಂದ ನಮ್ಮ ರಾಜ್ಯದಲ್ಲಿ ನಡೆದ ರೈತರ ಚಳುವಳಿ ವಿಚಾರದಲ್ಲಿ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಸದಸ್ಯರು ಈ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ ಹಾಗೂ ಟೀಕೆಗಳನ್ನು ಸಹ ಮಾಡಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಈ ಮೊದಲು ನನ್ನ ಮನಸ್ಸಿನಲ್ಲಿ ಏನು ಭಯವಿತ್ತು, ಅದು ದುರ್ದೈವದಿಂದ ಸತ್ಯವಾಗುತ್ತಿರುವಂತೆ ಕಾಣುತ್ತಿದೆ. ಈ ಚಳುವಳಿಯ ಕಾರಣದಿಂದಾಗಿ ಕಳೆದ ೪ ದಿನಗಳಲ್ಲಿ ಏನೇನು ನಡೆದಿದೆ ಎಂಬ ಬಗ್ಗೆ ನಾನು ಈ ಸದನಕ್ಕೆ ಅಂಕಿ ಅಂಶಗಳನ್ನು ಒದಗಿಸಿದ್ದೇನೆ. ಚಳುವಳಿಯ ಮೊದಲನೆಯ ದಿವಸ ಎಷ್ಟು ಜನ ಸತ್ಯಾಗ್ರಹಿಗಳು ಬಂಧನಕ್ಕೆ ಒಳಗಾಗಲು ಮುಂದೆ ಬಂದರೋ ಅದರ ಅರ್ಧದಷ್ಟು ಮಾತ್ರ ಎರಡನೆಯ ದಿವಸ ಮುಂದೆ ಬಂದರು. ಮೂರನೆಯ ದಿವಸ ಎರಡನೇಯ ದಿವಸದ ಅರ್ಧದಷ್ಟು ಜನರೂ ಸಹ ಬರಲಿಲ್ಲ. ನಾಲ್ಕನೇಯ ದಿವಸ ಇವರ ಅರ್ಧದಷ್ಟೂ ಸಹ ಇರಲಿಲ್ಲ. ಇಂದು ನಮ್ಮ ಇಡೀ ರಾಜ್ಯದಲ್ಲಿ ಬಂಧಿತರಾದವರ ಸಂಖ್ಯೆ ಕೇವಲ ೧೫೩. ಇದನ್ನು ಸತ್ಯಾಗ್ರಹಿಗಳು ಎಂದು ಕರೆಯಬೇಕೋ ಏನೂ ನನಗೆ ಗೊತ್ತಿಲ್ಲ. ಈ ಮೊದಲೇ ಹೇಳಿದಂತೆ ನನ್ನ ಎರಡನೇ ಭಯ ದುರ್ದೈವದಿಂದ ಸತ್ಯವಾಗಿ ಕಾಣುತ್ತಿದೆ. ನಮ್ಮ ರೈತ ಸಂಘದ ಚಳುವಳಿಯ ಕರೆಗೆ ಅವರು ನಿರೀಕ್ಷೆ ಮಾಡಿದ ಪ್ರಮಾಣದಲ್ಲಿ ಜನರ ಒಂದು ಪ್ರೋತ್ಸಾಹ ಸಿಗದಿದ್ದರೆ ಕೆಲವು ಕಾರ್ಯಕರ್ತರು ಹತಾಶೆಗೊಳ್ಳುವುದು ಸಾಧ್ಯವಿದೆ ಮತ್ತು ಆ ರೀತಿ ಹತಾಶಗೊಂಡಾಗ ಅವರ ಕೈಯಿಂದ ಏನೇನು ಘಟನೆಗಳಾಗಬಹುದೋ ಎಂಬುದನ್ನು ಊಹೆ ಮಾಡುವುದೂ ಕಷ್ಟ ಎಂದು ನಾನು ಹೇಳಿದ್ದೆ. ಅದಕ್ಕೆ ದುರ್ದೈವದಿಂದ ಇವೊತ್ತು ಸಾಕಷ್ಟು ಸೂಚನೆಗಳು ಸಿಕ್ಕಿವೆ. ಮೊದಲನೆಯ ಘಟನೆ ಎಂದರೆ, ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಎಂಬ ಊರಿನ ಮುಖ್ಯ ರಸ್ತೆಯ ಮೇಲೆ ಒಂದು ದೊಡ್ಡ ಮರವನ್ನು ಕಡಿದು ಹಾಕಿ ರೈತ ಸಂಘದವರು ಎಂದು ಹೇಳುವವರು ವಾಹನ ಸಂಚಾರಕ್ಕೆ ಅಡ್ಡಿ ಮಾಡಿದ್ದಾರೆ. ಎರಡನೇಯದಾಗಿ ಬೆಂಗಳೂರಿನ ಹತ್ತಿರ ಇರುವ ಬಿಡದಿಯಲ್ಲಿ ತಪಶೀಲ್ದಾರರ ಕಛೇರಿಯ ಮುಂದೆ ಇದ್ದಂಥ ಒಂದು ಜೀಪನ್ನು ರೈತ ಸಂಘದವರು ಎಂದು ಹೇಳಿಕೊಳ್ಳುವವರು ಬೆಂಕಿ ಹಾಕಿ ಸುಟ್ಟು ಹಾಕಿದ್ದಾರೆ. ಮೂರನೆಯದಾಗಿ ಶೃಂಗೇರಿ ಬಳಿ ಇರತಕ್ಕಂಥ ನೆಲ್ಲೂರು ಎಂಬ ಹಳ್ಳಿಯ ಹತ್ತಿರ ಆಗುಂಬೆಯಿಂದ ಬರುತ್ತಿದ್ದ ಬಸ್ಸನ್ನು ರೈತ ಸಂಘದವರು ಎಂದು ಹೇಳಿಕೊಳ್ಳುವ ೫೦ ಜನರು ನಿಲ್ಲಿಸಿ, ಆ ಬಸ್‌ಗೆ ಬೆಂಕಿ ಹಾಕಿದ್ದಾರೆ. ಇನ್ನೊಂದು ಅತ್ಯಂತ ದುರ್ದೈವದ ಸಂಗತಿ ಎಂದರೆ, ಇಂದು ಮಧ್ಯಾಹ್ನ ಎರಡೂವರೆ ಮತ್ತು ಮೂರು ಗಂಟೆಯ ಸಮಯದಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ರಾಜಾಸ್ಥಾನದ ಪ್ರವಾಸಿಗರ ಬಸ್‌ನ್ನು ಬಿಡದಿ ಬಳಿ ನಿಲ್ಲಿಸಿ ರೈತರು ಎಂದು ಹೇಳಿಕೊಳ್ಳುವವರು ಆ ಬಸ್‌ಗೆ ಕಲ್ಲೊಡೆದಿದ್ದಾರೆ. ಆ ಬಸ್‌ನ ಗಾಜುಗಳನ್ನೆಲ್ಲಾ ಒಡೆದು ಹಾಕಿದ್ದಾರೆ. ಇದರಿಂದ ಆ ಬಸ್‌ನಲ್ಲಿದ್ದ ಕೆಲವರಿಗೆ ಗಾಯಗಳಾಗಿವೆ. ಅನಂತರ ಆ ಪ್ರಯಾಣಿಕರ ಹತ್ತಿರ ಇರುವಂತಹ ದುಡ್ಡನ್ನು ಕೊಡಬೇಕೆಂದು ಹೇಳಿ ಸುಮಾರು ೬೦ ಸಾವಿರ ರೂಪಾಯಿಗಳನ್ನು ದೋಚಿಕೊಂಡು ಹೋಗಿದ್ದಾರೆ. ಈ ಬಸ್‌ನಲ್ಲಿದ್ದ ೫೧ ಜನ ಪ್ರಯಾಣಿಕರ ಪೈಕಿ ೨೩ ಜನ ಮಹಿಳೆಯರು ಹಾಗೂ ಅನೇಕ ಮಕ್ಕಳಿದ್ದರು. ಈ ಬಸ್‌ಗೆ ಬೆಂಕಿ ಹಾಕುವ ಪ್ರಯತ್ನವೂ ಸಹ ನಡೆದಾಗ ಅದನ್ನು ಹೇಗೋ ತಪ್ಪಿಸಿಕೊಂಡು ಆ ಬಸ್‌ನ ಡ್ರೈವರ್ ಬೆಂಗಳೂರಿಗೆ ಬಂದಿದ್ದಾನೆ. ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಿಂದ ಮೈಸೂರಿನ ಹೆಸರನ್ನು ಮತ್ತು ಕರ್ನಾಟಕದ ಹೆಸರನ್ನು ಕೇಳಿಕೊಂಡು ಇಲ್ಲಿಗೆ ಬರುತ್ತಾರೆ. ನಮ್ಮ ರಾಜ್ಯದ ಹೆಸರಿಗೆ ಒಳ್ಳೆಯ ಕೀರ್ತಿ ಇದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ಅನೇಕ ಐತಿಹಾಸಿಕ ಸ್ಥಳಗಳನ್ನು ನೋಡಲು ಹಾಗೂ ಮೈಸೂರು ನಗರದಲ್ಲಿರುವ ಅರಮನೆ, ಬೃಂದಾವನ ಹಾಗೂ ಇನ್ನಿತರ ಸ್ಥಳಗಳನ್ನು ನೋಡಲು ಪ್ರವಾಸಿಗರು ಬರುತ್ತಾರೆ. ಇಂತಹ ಜನರನ್ನು ಕೂಡ ಇವೊತ್ತು ನಮ್ಮ ಒಂದು ಸಂಸ್ಕೃತಿಗೆ ವಿರುದ್ಧವಾಗಿ ಹಿಂಸೆಗೊಳಪಡಿಸುವುದು ಹಾಗೂ ಅವರನ್ನು ದೋಚುವುದು ನಡೆದಿದೆ. ಈ ಒಂದು ಚಳುವಳಿಯ ಹಿನ್ನೆಲೆಯಲ್ಲಿ

ರೈತ ಸಂಘದ ಹೆಸರನ್ನು ಹೇಳಿಕೊಂಡು ಕೆಲವರು ತಮ್ಮ ಮನಸ್ಸಿಗೆ ಬಂದಂಥ ಕೃತ್ಯವನ್ನು ಮಾಡುವುದಕ್ಕೆ ಅವಕಾಶವಾಗಿದೆ ಎಂದು ನಾನು ಈ ಬೆಳಿಗ್ಗೆ ಕೂಡ ಹೇಳಿದ್ದೆ. ಆದರೆ ನಾನು ಹೇಳಿದ ಮಾತನ್ನೇ ನನಗೆ ತಿರುಗಿಸಿ ನಾವು ರೈತ ಸಂಘದ ಮೇಲೆ ಆರೋಪ ಮಾಡಿದ್ದೇವೆ, ರೈತ ಸಂಘದ ವರೆಲ್ಲಾ ದುಷ್ಕರ್ಮಿಗಳು ಎಂದು ನಾವು ಹೇಳಿದ್ದೇವೆ ಎಂದೆಲ್ಲಾ ಮಾನ್ಯ ಸದಸ್ಯರು ಹೇಳಿದರು. ಆದರೆ ಇದೇ ತಿಂಗಳ ೨೩ನೇ ತಾರೀಖು ಹಾಗೂ ೨೫ನೇ ತಾರೀಖು ನಾನು ಇಲ್ಲಿ ಮಾಡಿದಂಥ ಭಾಷಣವನ್ನು ಯಾರಾದರೂ ಕೇಳಿದ್ದರೆ ಇಲ್ಲವೇ ಪತ್ರಿಕೆಗಳನ್ನು ಸರಿಯಾಗಿ ಓದಿದ್ದರೆ ತಿಳಿಯುತ್ತಿತ್ತು. ನಾನು ರೈತ ಸಂಘದ ಪದಾಧಿಕಾರಿಗಳ ಮೇಲಾಗಲೀ ರೈತ ಸಂಘದವರ ಮೇಲಾಗಲೀ ಏನನ್ನೂ ಹೇಳಿಲ್ಲ. ರೈತ ಸಂಘದವರೆಂದು ಹೇಳಿಕೊಳ್ಳುವವರು ಇಂಥ ದುಷ್ಕೃತ್ಯವನ್ನು ಮಾಡುತ್ತಿದ್ದಾರೆ. ಆದರೆ ನಾನು ಯಾವ ಒಬ್ಬ ರೈತ ಮುಖಂಡರ ಮೇಲೂ ಕೂಡ ನೇರವಾಗಿ ಆರೋಪ ಮಾಡಿಲ್ಲ. ಅಥವಾ ರೈತ ಸಂಘದ ಪದಾಧಿಕಾರಿಗಳ ಮೇಲೂ ಕೂಡ ನೇರವಾಗಿ ಆರೋಪ ಮಾಡಿಲ್ಲ. ಅಥವಾ ರೈತ ಸಂಘದ ಸದಸ್ಯರ ಮೇಲೆ ಆದರೂ ಕೂಡ ನೇರವಾಗಿ ಆರೋಪ ಮಾಡಿಲ್ಲ. ಈ ರಾಜ್ಯ ರೈತ ಸಂಘದ ಅಧ್ಯಕ್ಷರು ನನಗೆ ಚೆನ್ನಾಗಿ ಪರಿಚಯಸ್ಥರು. ಅವರು ನನಗೇನೂ ಹೊಸಬರಲ್ಲ ಶ್ರೀಮಾನ್ ಹೆಚ್.ಎಸ್. ರುದ್ರಪ್ಪನವರು ಈ ಸದನದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಮತ್ತು ಬಹಳ ವರ್ಷಗಳ ಕಾಲ ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಮತ್ತು ಅವರು ಬಹಳ ಪ್ರಮುಖವಾದ ಖಾತೆಗಳನ್ನು ನಿರ್ವಹಿಸಿಕೊಂಡು ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಈ ಎಲ್ಲದರ ಅನುಭವ ಶ್ರೀಮಾನ್ ಹೆಚ್.ಎಸ್. ರುದ್ರಪ್ಪನವರಿಗೆ ಇದೆ. ಅವರು ಈ ವಿಷಯದಲ್ಲಿ ಯಾವುದಾದರೊಂದು ತೀರ್ಮಾನವನ್ನು ತೆಗೆದುಕೊಂಡರೂ ಸಹ ಬಹಳ ಜವಾಬ್ದಾರಿಯುತವಾಗಿಯೇ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಿದೆ. ಅಂಥ ಒಂದು ಆತ್ಮವಿಶ್ವಾಸ ನಮ್ಮ ಸರ್ಕಾರಕ್ಕೆ ಇದೆ. ಆದರೆ ದುರಾದೃಷ್ಟವಶಾತ್ ಅವರಿಗೆ ಮೈಯಲ್ಲಿ ಹುಷಾರ್ ಇಲ್ಲ. ಅವರು ಅನಾರೋಗ್ಯದಿಂದ ನರಳುತ್ತಿದ್ದಾರೆ. ಅವರೆ ನಾನು ನನ್ನ ಹೇಳಿಕೆಯಲ್ಲಿ ನೇರವಾಗಿ ರೈತ ಸಂಘದ ಪದಾಧಿಕಾರಿಗಳ ಮೇಲೆ ಆರೋಪ ಮಾಡಿದ್ದೇನೆಂದು ಹೇಳಿದ್ದಾರೆ. ಆದರೆ ಅವಕ್ಕೆ ನಮ್ಮ ಮಾನ್ಯ ಸ್ನೇಹಿತರು ಆಗಲೇ ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ ಇವತ್ತು ರಾಜ್ಯ ರೈತ ಸಂಘದ ಅಧ್ಯಕ್ಷರು ಚಳುವಳಿ ಮುಖಂಡತ್ವವನ್ನು ನಿರ್ವಹಿಸಿ ಅವರು ದಸ್ತಗಿರಿಯಾಗಲಿಲ್ಲ. ಅವರು ಇವತ್ತಿನ ಪರಿಸ್ಥಿತಿಯಲ್ಲಿ ಚಳುವಳಿಯಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ. ಆದರೂ ಸಹ ಅವರು ಯಾವ ರೀತಿಯಲ್ಲಿ ದಸ್ತಗಿರಿಯಾದರು ಅವರು ದಸ್ತಗಿರಿಯಾದುದು ಒಂದು ಕ್ರಿಮಿನಲ್ ಕೇಸ್‌ನಿಂದ. ಅಂದರೆ ಅವರು ಸಕಲೇಶ್ವರದಿಂದ ಹಾಸನಕ್ಕೆ ಬರುತ್ತಿರುವ ಸಂದರ್ಭದಲ್ಲಿ ಒಬ್ಬ ಕಾಫಿ ಪ್ಲಾಂಟರ್ ಶ್ರೀ ಹೆಚ್.ಆರ್. ವಿಶ್ವನಾಥ್ ಎಂಬುವವರ ಜೀಪನ್ನು ಓವರ್ ಟೇಕ್ ಮಾಡಿಕೊಂಡು ಸುಮಾರು ಮೂರು ಕಾರುಗಳು ಬರುತ್ತಿದ್ದವು. ಆ ಕಾರಿನ ನಂಬರು ಸಹ ಬೇಕಾದರೆ ನನ್ನಲ್ಲಿ ಇದೆ ಆದರೆ ನಾನು ಆ ಕಾರಿನ ನಂಬರ್‌ನ್ನು ಇಲ್ಲಿ ಹೇಳುವುದಕ್ಕೆ ಇಷ್ಟವಿಲ್ಲ. ಆದರೆ ಆ ಕಾರಿನಲ್ಲಿದ್ದವರು ಯಾರ್ಯಾರೆಂದರೆ ಶ್ರೀಮಾನ್ ಕೃಷ್ಣಗೌಡ, ಶ್ರೀಮಾನ್ ಹೆಚ್.ಹೆಚ್. ದೇವರಾಜ್, ಮತ್ತೆ ಶ್ರೀ ಬಿ.ಆರ್. ಪಾಂಡುರಂಗ ವಿಠಲ್ ಮತ್ತು ಶ್ರೀ ಎಂ.ಡಿ. ನಂಜುಂಡಸ್ವಾಮಿ ಮತ್ತೆ ಶ್ರೀ ಎನ್.ಡಿ. ಸುಂದರೇಶನ್, ಮತ್ತೆ ಶ್ರೀ ರವಿ ವರ್ಮಕುಮಾರ್ ಮತ್ತೆ ಶ್ರೀಮಾನ್ ಮಂಜುನಾಥದತ್ತ ಮೊದಲಾದವರು ಆ ಜೀಪನ್ನು ಓವರ್ ಟೇಕ್ ಮಾಡಿಕೊಂಡು ಬಂದು ಅವರ ಜೀಪಿನ ಮುಂದೆ ನಿಲ್ಲಿಸಿ ಅವರನ್ನು ಸಿಕ್ಕಾಪಟ್ಟೆ ಬೈದು ಜೀಪನ್ನು ನಿಲ್ಲಿಸಿದ್ದಾರೆ. ಅವರು ಕಾರಿನ ಶಬ್ದ ಮಾಡಿದರೂ ಇಲ್ಲವೂ ನನಗೆ ಗೊತ್ತಿಲ್ಲ. ಒಂದು ವೇಳೆ ಕಾರಿನ ಶಬ್ದ ಮಾಡಿದ್ದರೂ ಕೂಡ ಡೀಸಲ್ ಜೀಪಿನಲ್ಲಿ ಶಬ್ದ ಕೇಳಿಸುವುದಿಲ್ಲ. ಆದರೆ ಅವರು ಆ ಜೀಪನ್ನು ಓವರ್ ಟೇಕ್ ಮಾಡಿ ಆ ಜೀಪಿನ ಲೈಸೆನ್ಸ್ ಸಹ ಕೇಳಿದ್ದಾರೆ. ಅವರು ಒಳ್ಳೆ ಸರ್ಕಾರಿ ಅಧಿಕಾರಿಗಳ ತರಹ ಇದ್ದಾರೆ. ಆ ಮೇಲೆ ಆ ಕಾರಿನಲ್ಲಿದ್ದವರು ಸುಮಾರು ಎರಡು ಮೂರು ಜನ ಶ್ರೀಮಾನ್ ವಿಶ್ವನಾಥ್‌ರವರ ಮೇಲೆ ಬಿದ್ದು ಚೆನ್ನಾಗಿ ಹೊಡೆದಿದ್ದಾರೆ. ಶ್ರೀಮಾನ್ ವಿಶ್ವನಾಥ್ ಎಂಬುವವರು ಒಬ್ಬ ನಾಗರೀಕ ಪ್ರಜೆ. ಅವರು ಅವರಿಗೆ ಮಾಡಿದ ಅಪಮಾನವನ್ನು ತಡೆದುಕೊಳ್ಳಲಾರದೆ ಚಿಕ್ಕಮಗಳೂರಿಗೆ ಹೋಗಿ ಪೋಲೀಸ್‌ನವರಿಗೆ ದೂರು ಕೊಟ್ಟಿದ್ದಾರೆ. ಆಗ ಪೋಲೀಸಿನವರು ತಮ್ಮ ಕರ್ತವ್ಯ ಪಾಲನೆ ಮಾಡುವುದಕ್ಕಾಗಿ ಕ್ರಮ ತೆಗೆದುಕೊಂಡಿದ್ದಾರೆ. ಈ ವಿಷಯವನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ್‌ರವರೂ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರೂ ಪ್ರಸ್ತಾಪ ಮಾಡಿದರು. ಮತ್ತೆ ಪತ್ರಿಕೆಗಳ ಮೇಲೆ ಧಾಳಿ ಮಾಡಿದವರು ಜನತಾ ಪಕ್ಷದ ಕಾರ್ಯಕರ್ತರು ಯಾರೂ ಅಲ್ಲ. ಮತ್ತೆ ಶ್ರೀಮಾನ್ ನಂಜುಂಡಸ್ವಾಮಿಯವರನ್ನು ದಸ್ತಗಿರಿ ಮಾಡಿದಾಗ ಅವರ ಪರವಾಗಿ ಕೆಲವು ಜನ ಕೂಗಾಡಿದ್ದಾರೆ. ಮತ್ತೆ ಶ್ರೀಮಾನ್ ವಿಶ್ವನಾಥ್‌ರವರ ಪರವಾಗಿಯೂ ಕೂಡ ಕೆಲವು ಜನ ಕೂಗಾಡಿದ್ದಾರೆ. ನಾನು ಮೊದಲೇ ಹೇಳಿದೆ ಹಾಗೆ ಶ್ರೀಮಾನ್ ವಿಶ್ವನಾಥ್ ಎಂಬುವವರು ಸ್ವಲ್ಪ ಸ್ವಾಭಿಮಾನ ಇಟ್ಟು

ಕೊಂಡಿರತಕ್ಕಂಥ ವ್ಯಕ್ತಿ ಒಂದು ವೇಳೆ ಅವರ ಅಭಿಮಾನದವರು ಇದ್ದರೂ ಇರಬಹುದು ಮತ್ತೆ, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೂಡ ಅವರ ಪರವಾಗಿ ಮತ್ತು ಶ್ರೀಮಾನ್ ನಂಜುಂಡಸ್ವಾಮಿಯವರ ಪರವಾಗಿ ಕೂಗಾಡಿದ್ದಾರೆ. ಆದರೆ ಆ ಕೆಲಸವನ್ನು ಜನತಾ ಪಕ್ಷದ ಕಾರ್ಯಕರ್ತರು ಯಾರೂ ಮಾಡಿಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತಿನ ಸಂಪೂರ್ಣ ಚರ್ಚೆಯಲ್ಲಿ ನಾವು ಎಲ್ಲವನ್ನು ಕಡಿದು ಹಾಕಿದರೂ ಬರುವ ಸಾರಾಂಶವೆಲ್ಲಾ ಇಷ್ಟೇ. ಈ ರಾಜ್ಯ ರೈತಸಂಘದವರು ಮಾಡುತ್ತಿರುವ ಚಳುವಳಿಯನ್ನು ಮುಂದುವರಿಸಬೇಕೆಂದು ಯಾರಿಗೂ ಇಷ್ಟವಿಲ್ಲ. ರೈತ ಸಂಘದವರು ಚಳುವಳಿಯನ್ನು ನಿಲ್ಲಿಸಬೇಕು. ಆದಷ್ಟು ಬೇಗ ರೈತ ಸಂಘದವರು ಈ ಚಳುವಳಿಯನ್ನು ನಿಲ್ಲಿಸಬೇಕು. ಸಾಧ್ಯವಾದರೆ ಇವತ್ತಿನಿಂದಲೇ ಈ ಚಳುವಳಿಯನ್ನು ನಿಲ್ಲಿಸಿದರೆ ಒಳ್ಳೆಯದು ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಮಾತನಾಡುತ್ತಾ ಈ ಚಳುವಳಿ ನಿಲ್ಲಬೇಕಾದರೆ ಒಂದು ಪರಿಸರವನ್ನುಂಟು ಮಾಡಬೇಕೆಂದು ಹೇಳಿದರು ಅದರೆ ನಾನು ಮಾನ್ಯ ಸದಸ್ಯರನ್ನು ಯಾವ ರೀತಿಯ ಪರಿಸರವನ್ನುಂಟು ಮಾಡಬೇಕೆಂದು ಕೇಳುತ್ತೇನೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ರೈತ ಸಂಘದವರು ಚಳುವಳಿಯನ್ನು ಮಾಡುತ್ತಿರುವುದರಿಂದ ಅವರು ಸಾರ್ವಜನಿಕರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾರೆ. ನಿಜವಾದ ರೈತರ ಮೇಲೆ ಸಾರ್ವಜನಿಕರಿಗೆ ತಪ್ಪು ಅಭಿಪ್ರಾಯ ಮೂಡಿ ಬರುತ್ತದೆ. ಆ ರೀತಿಯ ಒಂದು ವಾತಾವರಣ ಈಗಾಗಲೇ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕಾರಣವೇನೆಂದರೆ, ಇವತ್ತಿನ ದಿವಸ ಬಂಧಿತರಾಗಿರುವ ರೈತರ ಸಂಖ್ಯೆ ಬರೀ ೧೨೧ ಜನರು ಮಾತ್ರ. ಆದ್ದರಿಂದ ಇವತ್ತು ರೈತ ಸಂಘವನ್ನು ಮುಂದೆ ಇಟ್ಟುಕೊಂಡು ಬಂದು ತಮ್ಮ ಸ್ವಂತ ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳುವವರು ಬೇಕಾದಷ್ಟು ಜನರು ಇದ್ದಾರೆ. ಇಲ್ಲವೆಂದು ನಾನು ಹೇಳುವುದಕ್ಕಾಗುವುದಿಲ್ಲ. ರೈತರು ಆ ರೀತಿಯ ವರ್ತನೆ ಮಾಡುವಂಥ ಅವಶ್ಯಕತೆ ಏನೂ ಇರಲಿಲ್ಲ. ಇವತ್ತು ಬೆಳಗ್ಗೆ ಒಂದು ಘಟನೆ ನಡೆದಿದೆ. ಅದು ಏನೆಂದರೆ ವಿದೇಶಿಯರು ಮೈಸೂರನ್ನು ನೋಡಲು ಬಂದು ವಾಪಸ್ಸು ಹೋಗುವಂಥ ಸಂದರ್ಭದಲ್ಲಿ ಅವರನ್ನು ಸಹ ತಡೆಗಟ್ಟಿದ್ದಾರೆ. ಅವರು ಇವತ್ತಿನ ದಿವಸ ವಿಮಾನದಲ್ಲಿ ಹೋಗಬೇಕಾಗಿತ್ತು. ಅವರು ಸುಮಾರು ೬-೭ಜನರು ಇದ್ದರು. ಅವರು ರಿಜರ್ವ್ ಮಾಡಿಸಿದ್ದ ಟಿಕೆಟ್ ಎಲ್ಲಾ ಕ್ಯಾನ್ಸಲ್ ಮಾಡಿಸಿದ್ದಾರೆ. ಇದಕ್ಕೆ ತಾವು ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ? ಮತ್ತೆ ರಾಜಸ್ಥಾನದಿಂದ ಬಂದಂಥ ಪ್ರವಾಸಿಗಳನ್ನು ರೈತ ಸಂಘದವರು ಅಡ್ಡಗಟ್ಟಿ ಸುಮಾರು ೬೦ ಸಾವಿರ ರೂಪಾಯಿಗಳನ್ನು ಲೂಟಿ ಮಾಡಿಕೊಂಡು ಹೋಗಿದ್ದಾರೆ. ಇವತ್ತು ನಮ್ಮ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಒಂದು ಸಂಸ್ಕೃತಿ ಇದೆ. ಇಡೀ ಭಾರತ ದೇಶದಲ್ಲಿಯೇ ನಮ್ಮ ಕರ್ನಾಟಕ ರಾಜ್ಯಕ್ಕೆ ಒಳ್ಳೆಯ ಕೀರ್ತಿ ಇದೆ. ಮತ್ತೆ ನಮ್ಮ ಕರ್ನಾಟಕ ರಾಜ್ಯಕ್ಕೆ ಬೇರೆ ದೇಶದಿಂದ ಯಾರಾದರೂ ಅತಿಥಿಗಳು ಬಂದರೆ ಅವರನ್ನು ಆದರದಿಂದ ಸ್ವಾಗತಿಸುವುದು ನಮ್ಮ ಕರ್ತವ್ಯವಾಗಿದೆ. ಈ ನಮ್ಮ ಕರ್ನಾಟಕ ರಾಜ್ಯಕ್ಕೆ ಇರುವಂಥ ಕೀರ್ತಿ ಬೇರೆ ಯಾವ ರಾಜ್ಯಕ್ಕೂ ಇಲ್ಲ. ಆದ್ದರಿಂದ ನಮ್ಮ ರಾಜ್ಯಕ್ಕೆ ಇರುವಂಥ ಕೀರ್ತಿ ಬೇರೆ ಯಾವ ರಾಜ್ಯಕ್ಕೂ ಇಲ್ಲ. ಆದ್ದರಿಂದ ನಮ್ಮ ರಾಜ್ಯದ ಕೀರ್ತಿಯನ್ನು ನಾವು ಉಳಿಸಿಕೊಳ್ಳುವುದಕ್ಕಾಗಿ ರಾಜಸ್ಥಾನದಿಂದ ಬಂದಂಥ ಪ್ರಯಾಣಿಕರ ಹಣವನ್ನು ರೈತ ಸಂಘದವರೂ ಸಹ ಲೂಟಿ ಮಾಡಿದ್ದಾರೆ. ಆವರಿಂದ ಲೂಟಿ ಮಾಡಿಕೊಂಡಂಥ ಹಣವನ್ನು ನಮ್ಮ ರಾಜ್ಯ ಸರ್ಕಾರ ಕೊಡುವಂತೆ ನಾವು ನಿರ್ಧಾರ ಮಾಡಿದ್ದೇವೆ. ಆದರೆ ನಾವು ಇವತ್ತು ಅವರಿಗೆ ಕೊಟ್ಟಂತಹ ದುಡ್ಡು ಯಾರಿಂದ ವಸೂಲು ಮಾಡುತ್ತೇವೆ? ರೈತ ಸಂಘದಿಂದ ವಸೂಲು ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಇವತ್ತು ನಾವು ರಾಜ್ಯದ ಬೊಕ್ಕಸದಿಂದ ಹಣವನ್ನು ಕೊಟ್ಟರೆ ಆ ಹಣವನ್ನು ಮತ್ತೆ ರೈತರಿಂದಲೇ ವಸೂಲು ಮಾಡಬೇಕಾಗುತ್ತದೆ. ಮತ್ತೆ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸೋಮಪ್ಪನವರು ಸಹ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ.ಡಿ. ಸೋಮಪ್ಪ.—ಸ್ವಾಮಿ, ನಾನು ಮಾತನಾಡುವುದಕ್ಕೆ ಅವಕಾಶವನ್ನೇ ತಾವು ಕೊಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಪರವಾಗಿ ನಾನು ಮಾತನಾಡಿದ್ದೇನೆ. ನಿಮ್ಮಿಂದ ಆದರೂ ನನಗೆ ಸ್ವಲ್ಪ ಗೌರವ ಸಿಗಲಿ.

೫-೩೦ ಪಿ.ಎಂ.

ರಾಜಸ್ಥಾನದ ಬಸ್ಸಿನ ವಿಚಾರ ಈಗ ಹೇಳಿದ್ದೇನೆ. ಕಳೆದ ಎರಡು ದಿವಸಗಳಲ್ಲಿ ಒಬ್ಬ ಯುವಕ ಮರ ಹತ್ತಿದಾಗ ಬಿದ್ದ. ಅವನ ಸ್ಥಿತಿ ಶೋಚನೀಯವಾಗಿತ್ತು, ಆಸ್ಪತ್ರೆಗೆ ತೆಗೆದು ಕೊಂಡು ಹೋಗಬೇಕಾದರೆ ಆ ದಿನ ಬಸ್ಸುಗಳನ್ನು ತಡೆದಿದ್ದರಿಂದ ಆತನನ್ನು ಆಸ್ಪತ್ರೆಗೆ ತೆಗೆದು ಕೊಂಡು ಹೋಗಲಿಕ್ಕೆ ಆಗಲಿಲ್ಲ. ಆತ ಅಸು ನೀಗಿದ. ಪಾರ್ಶ್ವವಾಯು ಇದ್ದಂತಹವನು ಸತ್ತ ವಿಚಾರವನ್ನು ನಾನು ಮೊದಲೇ ಹೇಳಿದ್ದೇನೆ. ಇದು ಕರ್ನಾಟಕ ರಾಜ್ಯ ರೈತಸಂಘದಿಂದ ಹೊರಡಿಸಿ ದಂತಹ ಕರ್ಮಣಿ. ಇದನ್ನು ಕೈಪಿಡಿಯೆಂದು ಹೇಳುತ್ತೀರೋ ಅಥವಾ ಪರ್ಮಿಟ್‌ಯೆಂದು ಹೇಳು ತ್ತೀರೋ ನೀವು ಏನು ಬೇಕಾದರೂ ಕರೆಯಿರಿ. ದಿನಾಂಕ ೨೬-೧-೧೯೮೪ರಂದು ರೈತಸಂಘದವರು ನಡೆಸಿದಂತಹ ಸತ್ಯಾಗ್ರಹ ಪತ್ರದಲ್ಲಿ ನಮೂದಿಸಿರತಕ್ಕದ್ದು. ಜಯಣ್ಣನವರು ಸಂಘದವರಾಗಿರು ತ್ತಾರೆ. ಅವರು ಸಂಘದ ಕೆಲಸ ಮಾಡುತ್ತಿದ್ದಾರೆ. ಅವರು ದುಷ್ಕರ್ಮಿಗಳ ಹಲ್ಲೆಗೆ ತುತ್ತಾಗಿದ್ದಾರೆ. ಅವರು ಆರೋಗ್ಯದ ದೃಷ್ಟಿಯಿಂದ ಬೇರೆ ಕಡೆಗೆ ಹೋಗುತ್ತಿದ್ದಾರೆ. ಸತ್ಯಾಗ್ರಹ ಮಾಡತಕ್ಕವರು ಅವರ ಮೇಲೆ ಹಲ್ಲೆ ಮಾಡದೆ, ಅವರು ಹೊರಗೆ ಹೋಗಲು ಪೂರ್ಣ ಅವಕಾಶ ಕೊಡಬೇಕು. ಈ ಕೆಳಕಂಡ ಯಾವುದಾದರೂ ಕಾರುಗಳಲ್ಲಿ ಜಯಣ್ಣನವರು ಇರುತ್ತಾರೆ. ಎಂಇಜಿ.....ಸಿಎಜಿ..... ಎಇಡಿ.....ಇದು ಅವರ ಪರ್ಮಿಟ್, ಇದಕ್ಕೆ ಏನು ಹೇಳುತ್ತೀರಿ? ಇದು ಪ್ರತಿ ಸರ್ಕಾರ ಆಲ್ಲದೆ ಬೇರೆ ಏನಾಗುತ್ತದೆ? ನೂರಕ್ಕೂ ಹೆಚ್ಚು ಘಟನೆಗಳನ್ನು ತಮಗೆ ಈಗ ನೀಡುತ್ತೇನೆ. ಅವರದು ಕೋರ್ಟ್ ಬೇರೆ ಇದೆ. ಅವರನ್ನು ಕೋರ್ಟಿಗೆ ದರ ದರನೆ ಎಳೆದುಕೊಂಡು ಹೋಗಿ ಜುಲ್ಮಾನೆ ಹಾಕಿದ್ದಾರೆ. ಅವರ ಸಮಸ್ಯೆಗಳು ಏನೇ ಇರಲಿ, ಸರ್ಕಾರದ ವಿರುದ್ಧ ಅವರ ಅಭಿಪ್ರಾಯ ಇದ್ದರೂ ಕೂಡ ಅದನ್ನು ವ್ಯಕ್ತ ಮಾಡಲಿ. ಆದರೆ ರೈತಸಂಘದ ಸದಸ್ಯರು ಈ ರೀತಿ ಮಾಡುವುದು ಸರಿಯಲ್ಲ ಸುಮಾರು ೬೦-೭೦ ಜನ ರೈತಸಂಘದ ಸದಸ್ಯರು ಹೊತಲು ಹಳ್ಳಿಯ ಹತ್ತಿರ ರಿಸರ್ವ್‌ಫಾರೆಸ್ಟ್‌ಗೆ ಸೇರಿದಂತಹ ಜಾಗದಲ್ಲಿ ಹೊಸದಾಗಿ ನೆಟ್ಟಿದ್ದ ಯೂಕಲಿಪ್ಟಸ್ ಪ್ಲಾಂಟೆಷನ್‌ನಲ್ಲಿ ೧ ಲಕ್ಷದ ೮೪ ಸಾವಿರ ಸಸಿಗಳನ್ನು ನಾಶಮಾಡಿದ್ದಾರೆ. ಅದೇ ರೀತಿ ಮಡೇನಹಳ್ಳಿ ಫಾರೆಸ್ಟ್ ಏರಿಯಾದಲ್ಲಿ ೧ ಲಕ್ಷದ ೨೦ ಸಾವಿರ ನೀಲಗಿರಿ ಸಸಿಗಳನ್ನು ನಾಶಮಾಡಿದರು. ಏತಕ್ಕೆ ಈ ರೀತಿ ಮಾಡುತ್ತಾರೆ? ರೈತಸಂಘದ ಚಟುವಟಿಕೆಗೂ ಗಿಡಗಳನ್ನು ನಾಶಮಾಡುವುದಕ್ಕೂ ಏನಾದರೂ ಸಂಬಂಧವಿದೆಯೆ? ನೀಲಗಿರಿ ಸಸಿಗಳನ್ನು ನೆಡುವುದರಿಂದ ತೊಂದರೆಯಿದೆಯೆಂದು ರೈತಸಂಘದವರಲ್ಲಿ ಕೆಲವರ ವೈಯಕ್ತಿಕ ಅಭಿಪ್ರಾಯವಿದೆ. ನಮ್ಮ ಸರ್ಕಾರ ಬಂದ ಮೇಲೆ ಈ ಸಂಬಂಧದಲ್ಲಿ ಹಿಂದೆ ಇದ್ದ ನೀತಿಯನ್ನು ಬದಲಾವಣೆ ಮಾಡಿದ್ದೇವೆ. ಅದಕ್ಕೆ ತಿದ್ದುಪಡಿ ತಂದಿದ್ದೇವೆ. ಮೊದಲು ವ್ಯಾಪಕವಾಗಿ ನೀಲಗಿರಿ ಸಸಿಗಳನ್ನು ನೆಡತಕ್ಕ ಕಾರ್ಯಕ್ರಮವಿತ್ತು, ಅದನ್ನು ನಾವು ಕಡಿಮೆ ಮಾಡಿದ್ದೇವೆ. ಅದರ ಬಗ್ಗೆ ವಾದವಿವಾದಗಳು ಇವೆ, ಅದರ ಬಗ್ಗೆ ಭಿನ್ನಾಭಿಪ್ರಾಯಗಳು ಇವೆ. ಜನರ ಮನಸ್ಸಿನಲ್ಲಿ ಏನಿದೆ ಅಂದರೆ ನೀಲಗಿರಿ ಮರಗಳು ಭೂಮಿಯ ಕೆಳಭಾಗದಲ್ಲಿರತಕ್ಕ ನೀರನ್ನೆಲ್ಲಾ ಹೀರಿಬಿಡುತ್ತವೆ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಅದರಿಂದ ಅನುಕೂಲವಾಗುತ್ತದೆಯೇ, ಅದರಿಂದ ಪ್ರತಿಕೂಲ ವಾಗುತ್ತದೆಯೇ ಎಂಬುದನ್ನು ಅಧ್ಯಯನ ಮಾಡಿಸಿದ್ದೇವೆ. ಅದರಿಂದ ಬಂದಂತಹ ಅಭಿಪ್ರಾಯ ನೇನೆಂದರೆ, ನೀಲಗಿರಿ ಗಿಡ ಎಷ್ಟು ಆಪಾದನೆಗೆ ಗುರಿಯಾಗಿತ್ತೋ ಅಷ್ಟು ಆಪಾದನೆಗೆ ಗುರಿಯಾಗ ತಕ್ಕದ್ದು ಅದರಿಂದ ಕಂಡುಬರಲಿಲ್ಲ. ನೀಲಗಿರಿ ಗಿಡದಿಂದ ಅನೇಕ ರೀತಿಯ ಅನುಕೂಲಗಳುಂಟು ಎಂದು ಹೇಳತಕ್ಕ ಅಭಿಪ್ರಾಯವಿದೆ. ಕೊರಟಗೆರೆ ತಾಲ್ಲೂಕು ಮಾರಕಾನಳ್ಳಿ ಫೋರೆಸ್ಟ್ ಸಬ್ ಇನ್ಸ್‌ಪೆಕ್ಟರನ್ನು, ಜಿಲ್ಲಾ ಅರಣ್ಯಾಧಿಕಾರಿಗಳನ್ನು, ಅರಣ್ಯ ರಕ್ಷಕರನ್ನು ರೈತಸಂಘದ ಸದಸ್ಯರುಗಳು ಶ್ರೀಮಾನ್ ಪುಟ್ಟಸ್ವಾಮಿ ಎಂಬುವರ ನೇತೃತ್ವದಲ್ಲಿ ಎದುರಿಸಿ ಅವರನ್ನು ಬೈಯ್ದು ಅಲ್ಲಿದ್ದ ನೀಲಗಿರಿ ಗಿಡಗಳನ್ನು ನಾಶ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಅಷ್ಟರಲ್ಲಿ ಫೋಲೀಸ್‌ನವರು ಬಂದದ್ದರಿಂದ ಅದು ಅಷ್ಟಕ್ಕೆ ನಿಂತಿದೆ. ದಿನಾಂಕ ೫-೧೨-೮೩ರಲ್ಲಿ ಕಟ್ಟಲಗಿ ಹಳ್ಳಿ ಹತ್ತಿರ ನರಸಿಯಪ್ಪ ಎಂಬ ಪೋಲೀಸ್ ಕಾನ್ಸ್‌ಟೇಬಲ್‌ನನ್ನು ೧೦ ಜನ ರೈತಸಂಘದ ಸದಸ್ಯರು ಕಟ್ಟಿ ಹಾಕಿ ಅವರು ಊರಿಗೆ ಹೋಗದಹಾಗೆ ತೊಂದರೆಕೊಟ್ಟು, ನೀನು ಯಾರ ಪರ್ಮಿಷನ್ ತೆಗೆದುಕೊಂಡು ಊರಿಗೆ ಬಂದೆ? ಸುಮಾರು ಮೂರು ಗಂಟೆಗಳವರೆಗೂ ಅವರನ್ನು ಅಕ್ರಮ ಬಂಧನದಲ್ಲಿಟ್ಟು, ಜನತಾ ಕೋರ್ಟ್ ನಿಂದ ಆತನಿಗೆ ಮೂರು ರೂಪಾಯಿ ದಂಡ ವಸೂಲಿ ಮಾಡಿ ಆತನನ್ನು ಬಿಟ್ಟಿದ್ದಾರೆ. ಅದೇರೀತಿ ಶ್ರೀಮಾನ್ ಬಸವರಾಜ್ ಎಂಬುವರಿಂದ ದಂಡ ವಸೂಲಿ ಮಾಡಿದ್ದಾರೆ. ಅವರು ಲೋನ್ ರಿಕವರಿ ಮಾಡಲಿಕ್ಕೆಂದು ಚಿಕ್ಕನಹಳ್ಳಿಗೆ ಹೋದಾಗ ಅವರಿಂದ ಮೂರು ರೂಪಾಯಿ ದಂಡ ವಸೂಲಿ ಮಾಡಿ ದ್ದಾರೆ. ಅದಕ್ಕೆ ರಶೀತಿ ಬೇರೆ ಕೊಟ್ಟಿದ್ದಾರಂತೆ. ಸುಮಾರು ೭೫ ಜನ ರೈತಸಂಘದ ಸದಸ್ಯರು ಚಿಕ್ಕನಾಯಕನಹಳ್ಳಿ ಹತ್ತಿರ.....

ಶ್ರೀ ಕೆ.ಹೆಚ್. ರಂಗನಾಥ್.—ಇದರ ಬಗ್ಗೆ ನಮಗಿಂತ ಮಾನ್ಯ ಬೊಮ್ಮಾಯಿಯವರನ್ನು ಕೇಳಬೇಕು?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಹೇಳಲಿ, ನಾನು ಆಮೇಲೆ ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಪಬ್ಲಿಕ್ ಹೆಲ್ತ್ ಸೆಂಟರ್‌ನ ಡಾಕ್ಟರ್ ಹತ್ತಿರ ಹೋಗಿ ಔಷಧಿ ಪಟ್ಟಿ ಕೇಳಿದ್ದಾರೆ, ದಾಖಲಾತಿ ರಿಜಿಸ್ಟರ್ ಕೇಳಿದ್ದಾರೆ, ಅದರ ಬಗ್ಗೆ ಲೆಕ್ಕ ಕೊಡಬೇಕೆಂದು ಡಾಕ್ಟರಿಗೆ ರೈತಸಂಘದವರು ಸತಾಯಿಸಿದ್ದಾರೆ. ೧೫ ಜನ ರೈತಸಂಘದವರು ಶ್ರೀಮಾನ್ ಕಿಡಿರಂಗಪ್ಪ ಎಂಬುವರ ನೇತೃತ್ವದಲ್ಲಿ ಪೋಲೀಸ್ ಕಾನ್‌ಸ್ಟೇಬಲ್ ಶ್ರೀ ನಾಗರಾಜು ಎಂದು ಹೇಳುವವರನ್ನು ಆಕ್ರಮವಾಗಿ ಬಂಧಿಸಿ ಈ ಊರನ್ನು ಪ್ರವೇಶ ಮಾಡಿದ್ದಕ್ಕಾಗಿ ಬಂಧಿಸಿ ಅವರ ಮೇಲೆ ಹಲ್ಲೆ ಮಾಡಿ, ಅವರನ್ನು ಸಿಕ್ಕಾಪಟ್ಟೆ ತಂದೆತಾಯಿಗಳ ಹೆಸರಿನಲ್ಲಿ ಅವರಿಗೆ ಬೈಯ್ದು ತೊಂದರೆ ಕೊಟ್ಟಿದ್ದಾರೆ. ಇಂತಹದ್ದು ಸುಮಾರು ಆಗಿದೆ. ತಿಪಟೂರು ಅಸಿಸ್ಟೆಂಟ್ ಕಮಿಷನರ್, ಲೇಡಿ ತಹಶೀಲ್ದಾರ್ ರವರಿಗೆ ಯಾವ ರೀತಿ ತೊಂದರೆಯಾಗಿದೆ ಎನ್ನುತಕ್ಕದ್ದನ್ನು ಹೇಳುತ್ತಾ ಹೋದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ. ಈ ಪಟ್ಟಿ ಬಹಳ ಉದ್ದವಿದೆ. ಮಾನ್ಯ ಸದಸ್ಯರು ಬಯಸಿದರೆ ಎಲ್ಲಾ ಘಟನೆಗಳ ವಿವರಗಳನ್ನು ಸಭೆಯಲ್ಲಿ ಕೊಡಲಿಕ್ಕೆ ತಯಾರಾಗಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಒಂದು ವರ್ಷದಲ್ಲಿ ಏನಾಗಿದೆ ಎಂಬುದನ್ನು ಕೊಡಬೇಡಿ. ಎರಡು ಮೂರು ವರ್ಷಗಳಲ್ಲಿ ಏನಾಗಿದೆ ಎನ್ನುವ ಪಟ್ಟಿಯನ್ನು ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಕೊಡೋಣ. ಮುಖ್ಯವಾಗಿ ನನ್ನ ಮೇಲೆ ಒಂದು ಟೀಕೆ ಬಂತು ಅದು ಏನೆಂದರೆ ನಾನು ಪ್ರಜೋದನೆಯನ್ನು ಕೊಟ್ಟಿದ್ದೇನೆಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಒಪ್ಪಿಸುತ್ತೇನೆ. ಪ್ರಜೋದನೆಯಾಗತಕ್ಕ ಯಾವ ಮಾತನ್ನು ನಾನು ಆಡಿಲ್ಲ. ನೀವು ಮಾತುಕತೆಗೆ ಬಾರದಿದ್ದರೆ, ಸತ್ಯಾಗ್ರಹವನ್ನು ಮಾಡುವುದಿದ್ದರೆ ಶಾಂತರೀತಿಯಿಂದ ಮಾಡಿ, ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಿ, ಸಾರ್ವಜನಿಕರಿಗೆ ತೊಂದರೆಯಾದರೆ ಕ್ರಮ ತೆಗೆದುಕೊಳ್ಳಬೇಕಾಗಿ ಬರಬಹುದು ಎಂದು ಇಷ್ಟು ಮಾತ್ರ ಹೇಳಿದ್ದೇನೆ. ಇದು ಪ್ರಜೋದನೆ ಎಂದು ತಿಳಿದುಕೊಂಡು ನಾನು ಹೇಳಿರತಕ್ಕ ಮಾತನ್ನು ಮಾಪಸ್ಸು ತೆಗೆದುಕೊಳ್ಳಬೇಕೆಂದು ಬಹುಶಃ ಯಾವ ಮಾನ್ಯ ಸದಸ್ಯರು ಹೇಳಲಾರರು ಎಂದು ನನ್ನ ಭಾವನೆ. ನಾನು ಅನೇಕ ಸಾರಿ ಅವರಿಗೆ ಕೈಮುಗಿದು ಕೇಳಿಕೊಂಡಿದ್ದೇನೆ. ಚಳುವಳಿಯನ್ನು ಮಾಡಲಿಕ್ಕೆ ಹೋಗಬೇಡಿ ಅದರಿಂದ ತುಂಬಾ ತೊಂದರೆಯಾಗುತ್ತದೆಂದು ಹೇಳಿದ್ದೇನೆ. ಚಳುವಳಿಯನ್ನು ನಿಗ್ರಹ ಮಾಡತಕ್ಕ ಶಕ್ತಿ ಸರ್ಕಾರಕ್ಕಿದೆ. ಚಳುವಳಿಯನ್ನು ಹತ್ತಿಕ್ಕುವ ಶಕ್ತಿ ಸರ್ಕಾರಕ್ಕೆ ಇದ್ದರೂ ಆ ಶಕ್ತಿಯನ್ನು ನಾವು ರೈತರ ವಿರುದ್ಧ ಉಪಯೋಗ ಮಾಡಲಿಕ್ಕೆ ನಾವು ಸಿದ್ಧರಿಲ್ಲ. ಕಳೆದ ನಾಲ್ಕೈದು ದಿವಸಗಳಿಂದ ಖಾಸಗಿಯವರಿಗೆ ಹಾಗೂ ಜನರಿಗೆ ನೋವಾಗಿದೆ ಎಂಬುದು ಎಲ್ಲರಿಗೂ ಗೊತ್ತುಂಟು. ತುಮಕೂರು ಜಿಲ್ಲೆಯ ಮಧುಗಿರಿ ಡಿ.ವೈ.ಎಸ್.ಪಿ. ಯವರಿಗೆ ಕಲ್ಲು ಹೊಡೆದಾಗ ಅವರ ಕಿಡ್ನಿಗೆ ವಿಪರೀತವಾದ ಗಾಯವಾಗಿದೆ. ಬಹುಶಃ ಅವರಿಗೆ ಏನಾಗುತ್ತದೋ ಗೊತ್ತಿಲ್ಲ. ಅವರು ಈಗ ಆಸ್ಪತ್ರೆಯಲ್ಲಿದ್ದಾರೆ. ಡಿ.ಎಸ್.ಪಿ ಗೆ ಏತಕ್ಕೆ ಕಲ್ಲು ಹೊಡೆದರು? ಆವರು ಪ್ರಜ್ಞಾಹೀನ ಸ್ಥಿತಿಯಲ್ಲಿ ಇರಬೇಕಾಗಿ ಬಂತು. ಅದೇರೀತಿ ಅನೇಕ ಕಾನ್‌ಸ್ಟೇಬಲ್‌ಗಳಿಗೂ ಕೂಡ ಕಲ್ಲೇಟುಗಳು ಬಿದ್ದವು. ಆದರೂಕೂಡ ಇವತ್ತಿನವರೆಗೂ ಪೋಲೀಸರಕಡೆಯಿಂದ ಒಂದಾದರೂ ಆಗಬಾರದಂಥ ಕೆಲಸ ಆಗಲಿಲ್ಲ. ಶ್ರೀಮಾನ್ ಯಾವಗಲ್ ಅವರಿಗೆ ನಾನು ಋಣಿಯಾಗಿದ್ದೇನೆ. ಅವರು ಪತ್ರ ಮತ್ತು ಆ ಕಡೆಗೆ ಕೂತಂಥ ಅನೇಕ ಶಾಸಕರು, ಮಲ್ಲಪ್ಪನವರೂ ಆಗಿದ್ದಾರೆ. ಅನೇಕರು ಹಿಂದೆ ರೈತ ಚಳುವಳಿಯಲ್ಲಿ ಭಾಗವಹಿಸಿದವರು. ನರಗುಂದದಲ್ಲಿ ಏನು ಆಯಿತೆಂದು ಅವರುಸ್ವಲ್ಪ ಮಟ್ಟಿಗೆ ನೆನಪುಮಾಡಿಕೊಟ್ಟರು. ನರಗುಂದದಲ್ಲಿ ಚಳುವಳಿ ಆಗತಕ್ಕಂಥ ಕಾರಣ ಏನು? ಸ್ವಲ್ಪ ತಲೆನೆ ಮಾಡಿ ನೋಡೋಣ. ನರಗುಂದದಲ್ಲಿ ಚಳುವಳಿಗೆ ಕಾರಣ ಇಷ್ಟೇ. ''ನೀರು ಕೊಡದೆ ದಯವಿಟ್ಟು ನಮ್ಮಿಂದ ನೀರು ಕಂದಾಯವನ್ನು ವಸೂಲು ಮಾಡಬೇಡಿ'' ಎಂದು ಅವರು ಕೇಳಿದ್ದೇ ಭಾರೀ ಅಪರಾಧವಾಯಿತೆ? ''ನಮಗೆ ನೀರು ಕೊಟ್ಟರೆ ಕಂದಾಯ ವಸೂಲು ಮಾಡಿ. ನಮಗೆ ನೀರು ಬಂದಿಲ್ಲ. ಪ್ರತಿಸಲ ನಮಗೆ ಬೇರೆ ಬೇರೆ ಇಲಾಖೆಗಳಿಂದ ಇಂತಿಷ್ಟು ನೀರು ಕಂದಾಯ ಕೊಡಬೇಕೆಂದು ಬರುತ್ತದೆ, ಆದ್ದರಿಂದ ಇದನ್ನು ಮಾಡಬೇಡಿ'' ಎಂದು ಅವರು ತಾಲ್ಲೂಕು ಕಛೇರಿ ಎದುರುಗಡೆ ಈ ವಿಚಾರವನ್ನು ಹೇಳಲಿಕ್ಕೆಹೋದರು ಅವರು ಹೀಗೆ ಹೇಳಲಿಕ್ಕೆ ಹೋದಾಗ ತಹಶೀಲ್ದಾರರ ವರ್ತನೆ ಎಷ್ಟು ಹೀನಯವಾಗಿತ್ತು. ಎಂದರೆ ಬೂಟ್ಸಾಕಾಲಿನಿಂದ ತಳಿದುಕೊಂಡು ಹೋದ ಅವನು, ಅಷ್ಟರ ಮಟ್ಟಿಗೆ ರೈತರ ಬಗ್ಗೆ ಅಪಮಾನದ

ವರ್ತನೆ ಆತನಿಂದಆಯಿತು. ಆಗ ರೈತರು ತಮ್ಮ ಸಹನೆಯನ್ನು ಕಳೆದುಕೊಂಡರು ಮತ್ತು ಮುಂದೆ ಏನು ಆಯಿತು ಎಂಬುದು ನಮಗೆ ಗೊತ್ತು. ಪೋಲೀಸರು ಗುಂಡು ಹಾರಿಸಿದರು, ಜನರು ಕೂಡ ಸತ್ತರು. ಅದೇ ರೀತಿ ಅನೇಕ ಘಟನೆಗಳು ಆಗಿವೆ. ಇದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದೂವರೆ ವರ್ಷದ ಹಿಂದೆ ನಿಪ್ಪಾಣಿಯಲ್ಲಿ ಆಯಿತು. ಅಲ್ಲಿ ಕೂಡ ರೈತರು ಏನೂ ಮಾಡಲಿಲ್ಲ. ಆದರೂ ಕೂಡ ಅಲ್ಲಿ ಪ್ರಚೋದನೆ ಪೋಲೀಸರ ಗೋಲಿಬಾರ್‌ನಿಂದ ಆಯಿತು. ಹತ್ತು ಜನ ರೈತರು ಸತ್ತರು. ಇಂದು ನಾನು ಸ್ಪಷ್ಟವಾಗಿ ಹೇಳಬಯಸುವುದೇನೆಂದರೆ, ನಾನು, ಯಾವತ್ತೂ ಕೂಡ ಪ್ರಚೋದನೆ ಕೊಡತಕ್ಕವನಲ್ಲ. ನಮ್ಮ ಸರ್ಕಾರ ಪ್ರೆಸ್ಟೀಜ್ ಮೇಲೆ ಇರತಕ್ಕಂಥ ಸರ್ಕಾರ ಅಲ್ಲ. ಇಂತಹ ವಿಚಾರದಲ್ಲಿ ನನ್ನ ಸರ್ಕಾರಕ್ಕೆ ಪ್ರೆಸ್ಟಿಜ್ ಎಂಬುದು ಇಲ್ಲ. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಮತ್ತು ದಲಿತ ವರ್ಗದವರ ಜೊತೆ ಮಾತುಕತೆ ನಡೆಸುವುದರಿಂದ ನಮ್ಮ ಪ್ರೆಸ್ಟಿಜ್ ಹೋಗುತ್ತದೆ ಎಂದು ನಾವು ತಿಳಿದುಕೊಂಡಿಲ್ಲ. ಇವತ್ತು ಏನು ಚಳುವಳಿಯನ್ನು ರೈತರು ನಡೆಸುತ್ತಿದ್ದಾರೆ, ಅದಕ್ಕೆ ನಿಜವಾದ ಸಬಲವಾದ ಕಾರಣ ಇಲ್ಲ. ಅವರ ಎಲ್ಲಾ ಸಮಸ್ಯೆಗಳು ಮುಗಿದಿವೆ ಎಂದು ನಾನು ಹೇಳುವುದಿಲ್ಲ. ಉದಾಹರಣೆಗೆ ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಿ ಪಕ್ಷದ ನಾಯಕರಿಗೆ ನಾನು ಬಹಳ ಋಣಿಯಾಗಿದ್ದೇನೆ. ಅವರಿಗೆ ಈ ಕಡೆ ಕುಳಿತಿರುವಂಥ ಜನತಾ ಪಕ್ಷದ ಸದಸ್ಯರು ತಮ್ಮ ಚುನಾವಣಾ ಘೋಷಣೆಯನ್ನು ಎಲ್ಲಿ ಮರೆತುಬಿಡುತ್ತಾರೋ ಏನ್ನತಕ್ಕಂಥ ಭಯ ಇದೆ ಅದನ್ನು ನಮಗೆ ಅವರು ಪುನಃ ನೆನಪು ಮಾಡಿಕೊಟ್ಟಿದ್ದಾರೆ, ಅದಕ್ಕಾಗಿ ನಾನು ಅವರಿಗೆ, ಋಣಿಯಾಗಿರಬೇಕು. ನಮಗೆ ಅದು ಅರ್ಥವಾಗಿಲ್ಲವೆಂದು ಅವರು ತಿಳಿದುಕೊಂಡಿದ್ದಾರೆ. ರೈತರಿಗೆ ಸಂಬಂಧಪಟ್ಟಿದ್ದು ನಾವು ಕೊಟ್ಟಂತಹ ಆಶ್ವಾಸನೆಗಳ ಮಾತು ಏನು ಇದೆ ಅದನ್ನು ಓದಿಬಿಡುತ್ತೇನೆ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರೈತರ ಪ್ರಚಂಡ ಚಳುವಳಿ. ರೈತ ಬೆಳೆಯುವ ಬೆಳೆಗಳಿಗೆ ನ್ಯಾಯ ಬೆಲೆ ದೊರಕಬೇಕು. ಅನ್ಯಾಯವಾದ ತೆರಿಗೆಗಳನ್ನು ರದ್ದುಪಡಿಸಲು ಆಗ್ರಹ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ರೈತರಿಗೆ ಏಕಮುಖವಾದ ತೆರಿಗೆಯನ್ನು ಮಾತ್ರ ವಿಧಿಸಲಾಗುವುದು. ಈ ವಿಷಯದಲ್ಲಿ ನಮಗೆ ಆಧಾರವಾಗಿದ್ದುದು ರಾಜ್ ಸಮಿತಿಯ ವರದಿ. ಇದರ ಬಗ್ಗೆ ಏಕಮುಖ ತೆರಿಗೆಯನ್ನು ಹಾಕುವ ಬಗ್ಗೆ ನಮ್ಮ ಕ್ಯಾಬಿನೆಟ್ ಉಪಸಮಿತಿಯನ್ನು ನೇಮಕ ಮಾಡಿದ್ದೇವೆ. ಇವತ್ತು ಎಲ್ಲಾ ಬೇರೆ ಬೇರೆ ರಾಜ್ಯಗಳಲ್ಲಿರತಕ್ಕಂಥ ಮಾಹಿತಿಗಳನ್ನು ಸಂಗ್ರಹಿಸಿ ರಾಜ್ ಕಮಿಟಿಯವರು ಏನು ಮಾಡಿದ್ದಾರೆ, ಅದನ್ನು ಅಧ್ಯಯನ ಮಾಡಿ ಒಂದು ತೀರ್ಮಾನಕ್ಕೆ ಬರಲಾಗುತ್ತದೆ. ಇವತ್ತು ರಿಪೋರ್ಟ್ ರೆಡಿಯಾಗಿದೆ. ರಿಪೋರ್ಟ್ ಬಂದ ತಕ್ಷಣ ನಿರ್ಣಯವನ್ನು ತೆಗೆದು ಕೊಳ್ಳುತ್ತೇವೆ. ಎರಡನೆಯದು, ರೈತರು ಬೆಳೆಸುವ ಎಲ್ಲಾ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ರದ್ದುಪಡಿಸುವುದು. ಸಾಲ ನೀಡಿಕೆಯಲ್ಲಿ ಸುಗುಮ ಪದ್ಧತಿಯನ್ನು ಜಾರಿಗೆ ತರುವುದು. ಬಡ್ಡಿದರವನ್ನು ಪುನರ್ ಪರಿಶೀಲನೆ ಮಾಡಲಾಗುವುದು. ರಿಜರ್ವ್ ಬ್ಯಾಂಕ್ ಕೊಡುವ ಬಡ್ಡಿದರಗಿಂತ ಹೆಚ್ಚು ಬಡ್ಡಿಯನ್ನು ವಸೂಲು ಮಾಡುವುದಿಲ್ಲ. ಹತ್ತು ಕಿಲೋಮೀಟರ್ ದೂರದವರೆಗೆ ಕೃಷಿ ಉತ್ಪನ್ನಗಳ ಸಂಗ್ರಹಕ್ಕೆ ಉಗ್ರಾಣ ನಿರ್ಮಾಣ. ಮಾನ್ಯ ಅಧ್ಯಕ್ಷರೇ, ರೈತರು ಬೆಳೆಸುವ ಎಲ್ಲಾ ವಸ್ತುಗಳ ಮೇಲೆ ಮಾರಾಟ ತೆರಿಗೆ ರದ್ದು ಎಂದು ಹೇಳಿದೆ. ಕೆಲವು ವಸ್ತುಗಳ ಮೇಲೆ ಈಗಾಗಲೇ ಮಾಡಿದ್ದೇವೆ. ಇದನ್ನು ಒಂದೇ ವರ್ಷದಲ್ಲಿ ಮಾಡುತ್ತೇವೆ ಎಂದು ನಾವು ಹೇಳಿಲ್ಲ. ಇದನ್ನು ನಾವು ಹಂತಹಂತವಾಗಿ ಮಾಡುತ್ತೇವೆ. ಒಂದೇ ಸಲಕ್ಕೆ ಎಲ್ಲ ತೆಗೆದುಹಾಕುತ್ತೇವೆಂದು ಮಾಡಿದರೆ ಮತ್ತು ಹೊಸದಾಗಿ ಕರವನ್ನು ಹಾಕದಿದ್ದರೆ, ಅರ್ಥಮಂತ್ರಿಯಾಗಿ ಮೂರು ವರ್ಷ ಕೆಲಸ ಮಾಡಿದಂಥ ಮಾನ್ಯ ವೀರಪ್ಪ ಮೊಯಿಲಿಯವರು ಅರ್ಥ ಮಾಡಿಕೊಳ್ಳಬಲ್ಲರು. ಆಮೇಲೆ ಅವರು ಪುನಃ ಓವರ್ ಡ್ರಾಫ್ಟ್ ವಿಚಾರದಲ್ಲಿ ಹೆಚ್ಚಿನ ಪ್ರಶ್ನೆ ಕೇಳತಕ್ಕ ಪ್ರಸಂಗ ಬರುತ್ತದೆ. ಈಗ ಪ್ರಸಂಗವನ್ನು ತಂದುಕೊಡುವುದಕ್ಕೆ ನಾನು ಸಿದ್ಧನಿಲ್ಲ. ಆದ್ದರಿಂದ ಈ ವಿಚಾರವನ್ನು ನಾವು ಕೈಬಿಟ್ಟಿಲ್ಲ ರಿಸರ್ವ್‌ಬ್ಯಾಂಕ್ ಬಡ್ಡಿದರಗಿಂತ ಹೆಚ್ಚಿಗೆ ವಸೂಲು ಮಾಡುವುದಿಲ್ಲವೆಂದು ಹೇಳಿದ್ದನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಯಾರಾದರೂ ಸಮಯಕ್ಕೆ ಸರಿಯಾಗಿ ಅಂದರೆ ಜೂನ್ ೩೦ನೇ ತಾರೀಖಿಗೆ ಪೂರಾ ಹಣವನ್ನು ಪಾವತಿ ಮಾಡುತ್ತಾರೆ, ಅಂಥವರಿಗೆ ರಿಸರ್ವ್‌ಬ್ಯಾಂಕ್ ನಿಗದಿಪಡಿಸಿದ ದರದಲ್ಲಿ ಸಾಲವನ್ನು ನಮ್ಮ ಕೇಂದ್ರ ಅಪೆಕ್ಸ್ ಬ್ಯಾಂಕ್ ಅವರಿಗೆ ಕೊಡುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುತ್ತೇನೆ. ಏನೆಂದರೆ ಕಳೆದ ವರ್ಷ ಜೂನ್ ೩೦ನೇ ತಾರೀಖಿನವರೆಗೆ ಸಾಲದ ಹಣವನ್ನು ಪಾವತಿ ಮಾಡಲು ಅನೇಕ ರೈತರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಅದಕ್ಕೆ ಕಾಲಾವಕಾಶ ಕೊಡಬೇಕೆಂದು ಹೇಳಿದ್ದಾರೆ. ನಾನು ಇವತ್ತು ಹೇಳುತ್ತೇನೆ, ಇದರ ಬಗ್ಗೆ ನಾನು ಇಲ್ಲಿಯವರೆಗೂ ಅಖೈರು ತೀರ್ಮಾನ ಮಾಡಿಲ್ಲ. ಏಕೆಂದರೆ, ನಬಾರ್ಡ್‌ನವರು ಈ ವಿಚಾರದಲ್ಲಿ ನಮಗೆ ಪತ್ರ ಬರೆದಿದ್ದಾರೆ, ಅವರ ಆತಂಕ ಏನು ಎಂದರೆ ''ನೀವು ಈ ರೀತಿ ಮಾಡಿದರೆ ವರ್ಲ್ಡ್ ಬ್ಯಾಂಕ್‌ನಿಂದ ಏನು ಸಾಲ ನಮಗೆ ಸಿಗುತ್ತದೆ, ಆ ಸಾಲ ನಮಗೆ ಸಿಗುವುದಿಲ್ಲ. ಅವರು ಸಾಲ ಕೊಡದಿದ್ದರೆ ನಿಮಗೆ

ತೊಂದರೆಯಾಗುತ್ತದೆ'' ಎಂದು. ನಬಾರ್ಡ್‌ನ ಅಧ್ಯಕ್ಷರು ನಾಳೆ ಸಾಯಂಕಾಲ ಇಲ್ಲಿಗೆ ಬರುತ್ತಿದ್ದಾರೆ. ಈ ವಿಚಾರದಲ್ಲಿ ಅವರ ಮನವೊಲಿಸಬಹುದು ಎನ್ನುವ ವಿಶ್ವಾಸವನ್ನು ನಾನು ಉಳ್ಳವನಾಗಿದ್ದೇನೆ. ಆದ್ದರಿಂದ ಇದರ ಬಗ್ಗೆ ರೈತರಿಗೆ ಚಿಂತೆ ಬೇಕಾಗಿಲ್ಲ. ನಾನು ಸಂಪೂರ್ಣವಾದ ಪ್ರಯತ್ನ ಮಾಡುತ್ತೇನೆ. ಈಗ ನಮ್ಮ ಮನಸ್ಸಿಗೆ ಬಂದುದನ್ನು ಮಾಡತಕ್ಕ ಚೈತನ್ಯ ಅಧಿಕಾರ ನಮಗೆ ಇದ್ದಿದ್ದರೆ ನಂಜುಂಡಸ್ವಾಮಿಯವರಾಗಲೀ, ಸುಂದರೇಶರವರಾಗಲೀ ಎಲ್ಲಕ್ಕಿಂತಲೂ ಮುಂದೆ ನಾನು ಹೋಗಬಹುದಿತ್ತು. ಆದರೆ ದುರ್ದೈವದಿಂದ ಪರಿಸ್ಥಿತಿ ಹಾಗಿಲ್ಲ. ನಂತರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಭಾರೀ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಗೊತ್ತು ಪಡಿಸಿದ ಕಾಲಾವಧಿಯೊಳಗೆ ಪೂರೈಸುವುದು' ಇದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದು ಕೊಂಡಿದ್ದೇವೆ. ಅನೇಕ ಅಪೂರ್ಣ ಕೆಲಸಗಳನ್ನು ಕಳೆದ ಒಂದು ವರ್ಷದಲ್ಲಿ ಮುಗಿಸಿದ್ದೇವೆ. ಭೂಗರ್ಭದ ನೀರಿನ ಬಳಕೆ ಹೊಸ ಯೋಜನೆ. ಇದರ ಬಗ್ಗೆ ಫ್ರೆಂಚ್ ಸರ್ಕಾರದ ಪತಿಯಿಂದ ಒಬ್ಬರು ಬಂದಿದ್ದರು. ತಮಿಳುನಾಡು ಮತ್ತು ನಮ್ಮ ಸರ್ಕಾರ ಅವರ ಜೊತೆಯಲ್ಲಿ ಮಾತುಕತೆ ನಡೆಸಿವೆ. ಅಲ್ಲಿಂದ ಭೂಗರ್ಭ ತಜ್ಞರು ಬರುತ್ತಾರೆ, ಅವರ ಒಂದು ಟೀಮ್ ನಮ್ಮಲ್ಲಿಗೆ ಬರುತ್ತದೆ. ಅವರು ಬಂದರೇ ಇಡೀ ರಾಜ್ಯದ ಮುಖ್ಯವಾಗಿ ಬರಗಾಲಪೀಡಿತ ಪ್ರದೇಶಗಳ ಸರ್ವೆ ಮಾಡುತ್ತಾರೆ. ಅವರಲ್ಲಿ ಎಂತಹ ಟೆಕ್ನಾಲಜಿ ಇದೆ ಎಂದರೆ ಎರಡು ಸಾವಿರ ಅಡಿಗಳ ಕೆಳಗೆ ನೀರು ಇದ್ದರೆ ಅದು ಯಾವ ನೀರು ಎಂಥ ನೀರು ಎಂಬ ಮಾಹಿತಿಯನ್ನು ಅವರು ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೇಳುತ್ತಿರುವುದಕ್ಕೆ ನಮಗೆ ಆತಂಕ ಇಲ್ಲ. ಆದರೆ ಹತ್ತು ತಿಂಗಳಿಂದ ಒಂದಾವರೂ ನೀರಾವರಿ ಬಾವಿಗಳನ್ನು ಕೊಟ್ಟಿಲ್ಲ.

ಅದರ ಬಗ್ಗೆ ಈವೊತ್ತೇ ಬೇಕಾದರೆ ಸರ್ಕಾರದ ಅಂಕಿ ಸಂಖ್ಯೆಗಳನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಬರೀ ಫೋಷಣೆ ಮಾಡುವುದಕ್ಕಿಂತ ಅದು ಕಾರ್ಯಗತ ವಾಗಬೇಕು, ಆ ರೀತಿಯಾಗಿ ಕಾರ್ಯಗತವಾಗಿಲ್ಲ ಅಂತ ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಪುನಃ ಪುನಃ ನಾವು ಜನತೆಗೆ ಕೊಟ್ಟಿರತಕ್ಕಂಥಾ ಮಾತುಗಳ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಈ ಭೂಮಿ ಪರಿಹಾರದ ಬಗ್ಗೆ ಈ ಒಂದು ವರ್ಷದಲ್ಲಿ ಶೇಕಡ ೮೦ ರಷ್ಟು ಕೊಡಬೇಕೆಂದು ತೀರ್ಮಾನ ಮಾಡಿ ಆ ಪ್ರಕಾರ ಭೂಮಾಲೀಕರಿಗೆ ಚಕ್ ಮುಖಾಂತರ ರಿಜಸ್ಟರ್ಡ್‌ಪೋಸ್ಟ್ ಮುಖಾಂತರ ಕಳುಹಿಸುತ್ತಿದ್ದೇವೆ.

ಶ್ರೀ ವೀರಪ್ಪಮೊಯ್ಲಿ.—ಅದು ಯಾರಿಗೆ ಮುಟ್ಟುತ್ತದೋ ಅನ್ನುವುದನ್ನು ನಾವು ಅಡ್ರೆಸ್ ಇಟ್ಟುಕೊಂಡು ಹುಡುಕಿ ನೋಡಿಕೊಳ್ಳಬೇಕು ಅಷ್ಟೆ.

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಮತ್ತೆ ಮತ್ತೆ ಹೇಳುತ್ತೇನೆ ನಮ್ಮ ಸರ್ಕಾರ ಬಂದ ಮೇಲೆ ನಾವು ಬಲಪ್ರಯೋಗ ಮಾಡಿ ಗುಂಡಿನ ಮಳೆ ಸುರಿಸಿಲ್ಲ. ಹಿಂದೆ ಶ್ರೀಮಾನ್ ಗುಂಡೂ ರಾಯರ ಹಾಗೂ ಶ್ರೀಮಾನ್ ವೀರಪ್ಪಮೊಯ್ಲಿರವರ ಸರ್ಕಾರ ಇದ್ದಾಗ ಗೋಲಿಬಾರ್ ಮಾಡಿ, ಗುಂಡೇಟಿನಿಂದ ಸತ್ತ ಕುಟುಂಬಗಳಿಗೆ ನಾವು ಮಾಸಿಕ ವೇತನವನ್ನು ಕೊಡುತ್ತಿದ್ದೇವೆ. ಅಷ್ಟೆ ಅಲ್ಲ ಅವರ ಮೇಲೆ ಇರುವ ಮೊಕದ್ದಮ್ಮೆಗಳನ್ನೆಲ್ಲಾ ವಾಪಸ್ಸು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ನಿಮ್ಮ ಸರ್ಕಾರ ಬಂದ ಮೇಲೆ ಬಳ್ಳಾರಿಯಲ್ಲಿ ಗುಂಡೇಟಿಗೆ ೭ ಜನರು ಸತ್ತರು, ಅವರಿಗೆ ಪ್ರತಿ ತಿಂಗಳು ಏನು ಪರಿಹಾರ ಕೊಡುತ್ತಾ ಇದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಬೇರೆ ವಿಚಾರ. ಇದು ರೈತರಿಗೆ ಸಂಬಂಧಪಟ್ಟ ಪ್ರಶ್ನೆ ಈವೊತ್ತು ನಾವು ರೈತರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೆ, ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತರ ಬಗ್ಗೆ ನಾವು ಏನೊಂದು ಮಾತು ಕೊಟ್ಟಿದ್ದೇವೊ ಅದಕ್ಕಿಂತಲೂ ಅನೇಕ ಹೆಜ್ಜೆಗಳು ಮುಂದೆ ಹೋಗಿದ್ದೇವೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಮಾನ್ಯ ಬಂಗಾರಪ್ಪನವರು ತಮ್ಮ ಒಂದು ಕಮಿಟಿ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ ಅವರು ಮಾತನಾಡುವಾಗ ಅವರು ಮಾಡಿದಂಥಾ ಶಿಫಾರಸ್ಸುಗಳನ್ನು ಜಾರಿಗೆ ತಂದಿದ್ದರೆ ಚೆನ್ನಾಗಿತ್ತು ಅನ್ನುವ ಮಾತನ್ನು ಹೇಳಿದರು. ಅದರ ಬಗ್ಗೆ ನಾನು ಹೇಳಬೇಕಾದರೆ ಅವರು ಬೆಟರ್‌ಮೆಂಟ್ ಲೆವಿ ಬಗ್ಗೆ ಶೇಕಡ ೫೦ ರಷ್ಟು ವಜಾ ಮಾಡಬೇಕು ಅಂತ ಹೇಳಿದರು. ನಾವು ಈವೊತ್ತಿನ ದಿವಸ ೧೦೦ ರಷ್ಟು ವಜಾ ಮಾಡಿದ್ದೇವೆ ಅನ್ನುವ ಮಾತನ್ನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಅದನ್ನು ಮಾಡಿದವರು ಯಾರು, ಹಿಂದಿನ ಸರ್ಕಾರದವರು ನೀವು ಅಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಮಾತನಾಡುವಾಗ ನಾವೇನು ಹೇಳಿದ್ದೇವೆ ಏನ್ನುವುದರ ಬಗ್ಗೆ ಲಕ್ಷ್ಯ ಕೊಟ್ಟು ಕೇಳಬೇಕು ಎಂದು ಹೇಳುತ್ತೇನೆ. ಈಗ ಏನಾಗಿದೆ ಎಂದರೆ ಯಾರು ರೈತರ ಬಗ್ಗೆ ನಾವು ಛಾಂಪಿಯನ್ ಅಂತ ಹೇಳಿಕೊಂಡಿದ್ದರೋ ಅವರು ಈಗ ಏನು ಮಾಡುತ್ತಿದ್ದಾರೆ ಎಂದು ನಾನು ಕೇಳುತ್ತೇನೆ, ಅಲ್ಲದೆ ಅವರ ವಾಕ್ ಶಕ್ತಿ ಈಗ್ಗೆ ೨–೩ ವರ್ಷದ ಹಿಂದೆ ಎಲ್ಲಿ ಹೋಗಿತ್ತು, ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಲಿ, ಈವೊತ್ತಿನ ದಿವಸ ಆ ರೈತರ ಪರವಾಗಿ ವಕಾಲತ್ತು ಪಹಿಸುತ್ತಿದ್ದಾರೆ, ಆವೊತ್ತಿನ ದಿವಸ ಅವರು ಏನು ಮಾಡುತ್ತಿದ್ದರು ಎಂದು ನಾನು ಕೇಳುತ್ತೇನೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಅವಾಗಲೂ ಕೂಡ ನಾನು ರೈತರ ಬಗ್ಗೆ ರೈತರ ಸಮಸ್ಯೆಗಳ ಬಗ್ಗೆ ಏನು ಇದೆ ಅನ್ನುವುದನ್ನು ಹೇಳುತ್ತಿದ್ದೆ. ಇದೇನೂ ಹೊಸದೇನೂ ಅಲ್ಲ. ತಾವು ಹಿಂದಿನ ಕಡತವನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಬಹಳ ಸಂತೋಷ ಏತಕ್ಕೆಂದರೆ ಅವರು ಸ್ವತಃ ರೈತರಾಗಿದ್ದಾರೆ ಅಂತ ನನಗೆ ಅವರ ಬಗ್ಗೆ ಒಂದು ಸಂತೋಷ ಏನೆಂದರೆ ಈವೊತ್ತಿನ ದಿವಸ ಮಾನ್ಯ ಖಂಡ್ರೆಯವರ ಮನಸ್ಸು ಸ್ವಲ್ಪ ಬದಲಾಗಿದೆ. ತಮ್ಮ ಅಭಿಪ್ರಾಯವನ್ನು ಮತ್ತೆ ಬದಲಾವಣೆ ಮಾಡಬೇಡಿರಿ ಎಂದು ನಾನು ಕೇಳುತ್ತೇನೆ. ಈವೊತ್ತಿನ ದಿವಸ ಈ ರೈತರ ಸಮಸ್ಯೆ ಬಗ್ಗೆ, ರೈತರ ಬಗ್ಗೆ ನಮ್ಮ ಹೃದಯದಲ್ಲಿ ಏನು ಒಂದು ಬುಗ್ಗೆ ಹರಡಿದೆ ಆ ಬುಗ್ಗೆ ಯಾವಾಗಲೂ ಬರಲಿ, ಆ ರೈತರ ಬಗ್ಗೆ ಯಾವಾಗಲೂ ಸಹಾನುಭೂತಿ ಇರಲಿ ಎಂದು ನಾನು ಹೇಳಬಯಸುತ್ತೇನೆ.

ಇನ್ನು ವಾಟರ್‌ರೇಟ್ ಬಗ್ಗೆ ಹೇಳಬೇಕಾದರೆ ಇದನ್ನು ೫೦ ಪರ್ಸೆಂಟ್‌ಗೆ ರೆಡ್ಯೂಸ್ ಮಾಡಬೇಕು ಅಂತ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಮಗೆ ಕಾರ್ಮಿಕರ ಬಗ್ಗೆಯೂ ಸ್ವಲ್ಪ ಸಹಾನುಭೂತಿ ಇರಲಿ.

ಶ್ರೀ ರಾಮಕೃಷ್ಣ ಹೆಗಡೆ.—ಅವರ ಬಗ್ಗೆಯೂ ಸಹಾನುಭೂತಿ ಇದೆ. ಮಾನ್ಯ ಬಂಗಾರಪ್ಪ ಸಮಿತಿಯವರು ಇದರ ಬಗ್ಗೆ ಏನು ಶಿಫಾರಸು ಮಾಡಿದ್ದರು ಅದರಂತೆ ಮಾಡಲಾಗಿದೆ.

ಶ್ರೀ ಭೀಮಣ್ಣ ಎಸ್ ಖಂಡ್ರೆ.—ತಾವು ಅಗ್ರಿಕಲಚರಲ್ ಇನ್‌ಕಂಟ್ಯಾಕ್ಸ್ ಹಾಕಿದ್ದೀರಲ್ಲಾ.

SRI RAMAKRISHNA HEGDE.—I won't yield. What is this? This is not a joke. If there is interjection that is allowed. ನಾನು ಇನ್ನು ೫ ನಿಮಿಷದಲ್ಲಿ ಮುಗಿಸುತ್ತೇನೆ. ಆಮೇಲೆ ಅವರು ಏನು ಕೇಳಬೇಕೋ ಕೇಳಲಿ ಉತ್ತರ ಕೊಡುತ್ತೇನೆ. ಹೀಗೆ ೫–೫ ನಿಮಿಷಕ್ಕೂ ಮಧ್ಯೆ ಮಧ್ಯೆ ಎದ್ದು ನಿಂತುಕೊಂಡರೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಮೊದಲು ನಾನು ಏನು ಹೇಳುತ್ತೇನೋ ಅದನ್ನು ಕೇಳಲಿ.

ಇನ್ನು ಪರ್ಚೇಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಮಾನ್ಯ ಬಂಗಾರಪ್ಪ ಸಮಿತಿಯವರು ಇದರ ಬಗ್ಗೆ ಶಿಫಾರಸ್ಸು ಮಾಡಿದ್ದರು. ೧೭.೬೦ ಪೈಸೇ ಇದ್ದುದನ್ನು ಈಗ ೧೨.೬೦ ಪೈಸೇ ವಸೂಲು ಮಾಡುತ್ತಿದ್ದರು ಅದನ್ನು ಈಗ ೫.೬೦ ಪೈಸೆಗೆ ಇಳಿಸಿದ್ದೇವೆ. ಈ ಪರ್ಚೇಸ್ ಟ್ಯಾಕ್ಸ್‌ನಲ್ಲಿ ಸರ್ಕಾರಕ್ಕೆ ೫ ಕೋಟಿ ರೂಪಾಯಿ ನಷ್ಟವಾಗುತ್ತದೆ. ಸಾಮಾನ್ಯವಾಗಿ ಬಂಗಾರಪ್ಪ ಸಮಿತಿಯವರು ಮಾಡಿದಂಥಾ ಶಿಫಾರಸ್ಸನ್ನೆಲ್ಲಾ ಜಾರಿಗೆ ಈಗಾಗಲೇ ತಂದಿದ್ದೇವೆ. ಅಷ್ಟೆ ಅಲ್ಲ ಇನ್ನು ಕೆಲವುದರಲ್ಲಿ ಅವರು ಹೇಳಿದ್ದಕ್ಕಿಂತಲೂ ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಅದ್ಯಾವುದೆಂದರೆ There should be moratorium on the Co-operative loans. The Government should clear Commercial Bank loans. ಅಷ್ಟೆ ಅಲ್ಲ ಈ ಮೊರಟೋರಿಯಂ ಲೋನ್ಸ್ ಏನು ಇದೆ ಅಂದರೆ ೧೦ ಸಾವಿರ ಆಸಲು ಆದರೆ ೨೦ ಸಾವಿರ ರೂಪಾಯಿ ಬಡ್ಡಿ ಕೊಡಬೇಕಾಗಿತ್ತು, ಆ ಬಡ್ಡಿಯನ್ನೆಲ್ಲಾ ನಾವು ಕೊಟ್ಟಿದ್ದೇವೆ. ಇದರಿಂದ ಸರ್ಕಾರಕ್ಕೆ ೨೮ ಕೋಟಿ ರೂಪಾಯಿಯಷ್ಟು ಹಣ ಖರ್ಚು ಮಾಡುವ ಪ್ರಸಂಗ ಬಂದಿದೆ. ಅಷ್ಟೇ ಅಲ್ಲ ಅವರು ಸಮಯಕ್ಕೆ ಸರಿಯಾಗಿ ಹಣ ಕೊಟ್ಟರೆ ಅಂತಹವರಿಗೆ ಯಾವ ಸುಸ್ತಿ ಬಡ್ಡಿಯೂ ಇಲ್ಲದೆ ರಿಸರ್ವ್

ಬ್ಯಾಂಕಿನ ಬಡ್ಡಿದರ ಏನು ಇದೆ ಆ ರೇಟಿಗಿಂತಲೂ ಕಡಿಮೆ ನಾವು ಕೊಡುತ್ತಿದ್ದೇವೆ. Rate of interest on loan for agriculture purpose should not exceed 9% ಅಂತ ಇದ್ದರೂ ನಾವು ಅದನ್ನು 7½ ಪರ್ಸೆಂಟ್‌ಗೆ ಇಳಿಸಿದ್ದೇವೆ. ಆಮೇಲೆ ಇನ್ನೇನು ರಿಯಾಯಿತಿ ಕೊಟ್ಟಿದ್ದೇವೆ ಎಂದರೆ After any natural calamity it would be obligatory for the Government to give free seeds. ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಆಮೇಲೆ ಇನ್ನೇನು ಮಾಡಿದ್ದೇವೆ ಎಂದರೆ ಎಲ್ಲಿ ಬರಗಾಲ ಬಂದಿದೆಯೋ ಎಲ್ಲಿ ಮಳೆ ಹೆಚ್ಚಾಗಿ ಆಗಿ ಬೆಳೆ ನಷ್ಟವಾಗಿದೆಯೋ ಅಂಥಾ ಕಡೆಗಳಲ್ಲೂ ಕೂಡ ಆದಷ್ಟು ಸಹಾಯ ನಾವು ಮಾಡಿಕೊಟ್ಟಿದ್ದೇವೆ. ಇಷ್ಟೇ ಅಲ್ಲದೆ ಇನ್ನೇನು ಕೆಲಸ ಮಾಡಿದ್ದೇವೆ ಎಂದರೆ As far as digging of irrigation wells by small and marginal farmers Government should undertake to do this job for them and recover the amount from them as arrears of land revenue ಅಂತ ಮಾಡಿದ್ದೇವೆ. ಆದರೆ ಈ ಒಂದು ಸೂಚನೆಯನ್ನು ಜಾರಿಗೆ ತರಲಿಕ್ಕೆ ವ್ಯವಹಾರಿಕವಾಗಿ ಸ್ವಲ್ಪ ತೊಂದರೆ ಇದೆ. ಇದರ ಬದಲು ನಾವು ಈಗ ಏನು ಮಾಡಿದ್ದೇವೆ ಎಂದರೆ ಯಾರು ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ ಅವರಿಗೆ ಸಾಲ ಎಷ್ಟು ಕೊಡುತ್ತಿದ್ದೇವೋ ಅದಕಿಂತಲ್ಲೂ ಸ್ವಲ್ಪ ಹೆಚ್ಚಾಗಿ ನಾವು ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಉದಾಹರಣೆಗೆ ನೀರಾವರಿ ಬಾವಿಗೆ ಸುಮಾರು ೧½ ಸಾವಿರ ರೂಪಾಯಿ ಖರ್ಚು ಬಂದರೆ ಅದರಲ್ಲಿ ೫೦ ಪರ್ಸೆಂಟ್ ಸುಮಾರು ೧೦ ಸಾವಿರ ರೂಪಾಯಿ ಅಷ್ಟು ಸಬ್ಸಿಡಿಯನ್ನು ಕೊಡುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಇದರಲ್ಲಿ ತಾವು ಒಂದು ತಪ್ಪು ಕೆಲಸ ಮಾಡಿದ್ದೀರಿ ಅದೇನೆಂದರೆ ಅವರು ಹೇಳಿದ್ದನ್ನೆಲಾ ತಾವು ಒಪ್ಪಿಕೊಂಡಿದ್ದೀರಲ್ಲಾ ಅದೇ ತಪ್ಪು.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟೇ ಅಲ್ಲ In case of failed wells full amount of the loan should be waived instead of 50% at present. ಹೀಗೆ ನಾವು ೧೦೦ ಕ್ಕೆ ೧೦೦ ಪರ್ಸೆಂಟ್ ಸರ್ಕಾರ ಕೆಲವುದರಲ್ಲಿ ಏನು ರಿಯಾಯಿತಿ ಕೊಟ್ಟಿದೆ ಇದರಿಂದ ಸರ್ಕಾರಕ್ಕೆ ಸುಮಾರು ೧೫ ಕೋಟಿ ರೂಪಾಯಿ ಖರ್ಚು ಬರುತ್ತದೆ. ನಾನು ಮೊದಲೇ ಹೇಳಿದ ಹಾಗೆ ಈ ಪೊರಟೋರಿಯಂ ಲೋನ್ಸ್‌ನಲ್ಲಿ ೨೮ ಕೋಟಿ ರೂಪಾಯಿ ರಿಯಾಯಿತಿ, ಪರ್ಚೇಸ್ ಟ್ಯಾಕ್ಸ್‌ನಲ್ಲಿ ೫ ಕೋಟಿ ರೂಪಾಯಿ, ಮತ್ತು ಇನ್ನು ಕೆಲವುದರಲ್ಲಿ ೧೦೦ಕ್ಕೆ ೧೦೦ರಷ್ಟು ಏನು ರಿಯಾಯಿತಿ ಕೊಟ್ಟಿದ್ದೇವೆ ಅದರಲ್ಲಿ ಸುಮಾರು ೧೫ ಕೋಟಿ ರೂಪಾಯಿ, ಇಷ್ಟೆಲ್ಲಾ ರಿಯಾಯಿತಿ ಕೊಟ್ಟಿದ್ದೇವೆ. ಇದಲ್ಲದೆ ತಕಾವಿ ಲೋನ್ ಬೇರೆ ಮಾಫಿ ಮಾಡಿದ್ದೇವೆ. ಹೀಗೆ ಎಲ್ಲಾ ಸೇರಿದರೆ, ಒಟ್ಟು ೪೮ ಕೋಟಿ ರೂಪಾಯಿಗಳಷ್ಟು ನಾವು ರೈತರಿಗೆ ಸಹಾಯಧನ ಕೊಟ್ಟಿದ್ದೇವೆ. ಇಷ್ಟೇ ಅಲ್ಲದೆ ಯಾವ ರೈತರುಗಳು ನೇರವಾಗಿ ಮಾರ್ಕೆಟಿಂಗ್ ಸೊಸೈಟಿಗೆ ಹೋಗಿ ತಮ್ಮ ಧಾನ್ಯಗಳನ್ನು ಮಾರಾಟ ಮಾಡುತ್ತಾರೋ ಅಂಥಾವರಿಗೆ ೫ ಪರ್ಸೆಂಟ್ ಸಬ್ಸಿಡಿ ಬೇರೆ ಕೊಡುತ್ತಿದ್ದೇವೆ, ಬಹುಶಃ ಇದು ಸುಮಾರು ೮–೧೦ ಕೋಟಿ ರೂಪಾಯಿಯಷ್ಟು ಖರ್ಚು ಸರ್ಕಾರಕ್ಕೆ ಬೀಳುತ್ತದೆ.

೬–೦೦ ಪಿ. ಎಂ.

ಇಂಟರೆಸ್ಟ್ ಸಬ್ಸಿಡಿ ಏನು ಇದೆ ಅದು ಕಂಟಿನ್ಯೂಯಸ್ ಆಗಿ ಪ್ರತಿ ವರ್ಷವೂ ನಮಗೆ ಆರು ಕೋಟಿ ರೂಪಾಯಿಗಳವರೆಗೆ ಬರುತ್ತಿದೆ. ಆದ್ದರಿಂದ ಮಾನ್ಯ ಸದಸ್ಯರಾದ ಬಂಗಾರಪ್ಪನವರಿಗೆ ಸಮಾಧಾನವಾಗಿರಲೇಬೇಕು. ಅವರ ಸರ್ಕಾರ ಇದ್ದಾಗ ಅವರ ಕಮಿಟಿಯ ಶಿಫಾರಸ್‌ಗಳು ಯಾವುದೂ ಸಹ ಸ್ವೀಕಾರ ಆಗಿರಲಿಲ್ಲ, ಅವನ್ನು ನಾವು ಇವತ್ತು ಜಾರಿಗೆ ತಂದಿದ್ದೇವೆ. ಅದಕ್ಕಿಂತಲೂ ಅನೇಕ ಹೆಜ್ಜೆ ನಾವು ಮುಂದೆ ಹೋಗಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಯಾರ ಸರ್ಕಾರ ಹೆಚ್ಚು ಕೆಲಸ ಮಾಡಿದೆ, ಕಡಿಮೆ ಮಾಡಿದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ತಾವು ಒಂದು ಸಮಿತಿಯನ್ನು ಮಾಡಿಯಾರು ಏನೇನು ಮಾಡಿದ್ದಾರೆನ್ನುವುದನ್ನು ನೋಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಈಗಲೇ ಇದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಶ್ರೀಮಾನ್ ಮೊಯಿಲಿಯವರ ಸರ್ಕಾರ ಇದ್ದಾಗ ಮೂರು ವರ್ಷದಲ್ಲಿ ಅವರು ಏನೇನು ಮಾಡಿದರು, ರೈತರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ, ರೈತರ ಬೇಡಿಕೆಗಳು ಏನು ಇದ್ದವು, ಅವರ ಚಳುವಳಿಯ ಬಗ್ಗೆ

ಏನಾಯಿತು. ಕಳೆದ ಒಂದು ವರ್ಷದಲ್ಲಿ ಇವತ್ತಿನವರೆಗೆ ಏನಾಗಿದೆ ಎಲ್ಲವನ್ನೂ ಸಂಗ್ರಹಣೆ, ರಿಕಾರ್ಡುಗಳನ್ನು ತರಿಸಿ ಮಾಹಿತಿಯನ್ನು ತರಿಸಿಕೊಂಡು ಒಂದು ವರದಿಯನ್ನು ಕೊಡಲಿಕ್ಕೆ ಒಂದು ಕಮಿಟಿಯನ್ನು ಮಾಡಲಿಕ್ಕೆ ನಾನು ಸರ್ಕಾರದ ಪರವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಮೂರು ವರ್ಷಗಳ ಕಾಲ ಆಳಿದರು, ತಾವಿನ್ನೂ ಒಂದು ವರ್ಷ ಆಳಿದಿರಿ, ಇನ್ನೂ ಎರಡು ವರ್ಷ ತಡೆಯಿರಿ.

ಶ್ರೀ ರಾಮಕೃಷ್ಣ ಹೆಗಡೆ.—ನಮಗೆ ಒಂದು ವರ್ಷವೇ ಸಾಕು. ಮತ್ತೆ ವಿರೋಧಪಕ್ಷದ ನಾಯಕರು ನಾನು ಈ ಸದನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೇನೆ, ಮನಸ್ಸಿಗೆ ಬಂದಂತೆ ಹೇಳಿಕೆ ಕೊಡುತ್ತಿದ್ದೇನೆ, ಇದನ್ನು ಹೊರಗಡೆಯೂ ಹೇಳಬೇಕಾಗಿತ್ತು ಎಂದು ಹೇಳಿದ್ದಾರೆ. ನಾನು ಈ ವಿಷಯದಲ್ಲಿ ಹೊರಗಡೆ ಎಷ್ಟು ಹೇಳಿದ್ದೇನೆ ಅದರ ಹತ್ತರಷ್ಟು ಇಲ್ಲಿ ಹೇಳಿಲ್ಲ. ಹುಬ್ಬಳ್ಳಿ, ಧಾರವಾಡ, ಕೋಲಾರ ಪ್ರತಿಯೊಂದು ಜಿಲ್ಲೆಯಲ್ಲಿ ನಾನು ಸ್ಪಷ್ಟವಾಗಿ ರೈತರನ್ನು ಉದ್ದೇಶಿಸಿ ಮಾತನಾಡಿದ್ದೇನೆ. ರೈತರ ಸಂಘಟನೆಯನ್ನು ಬಲಪಡಿಸಿಕೊಳ್ಳಬೇಕು, ಬಹಳ ವರ್ಷಗಳಿಂದ ರೈತರು ರೈತ ಕಾರ್ಮಿಕರು ಸಂಘಟನೆಯ ಭಾವನೆಯ ಬೆಳೆಸಿಕೊಂಡಿರಲಿಲ್ಲ. ಈಗ ಅದನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದ್ದೇನೆಯೇ ಹೊರತು ಅದನ್ನು ಒಡೆಯಬೇಕು ಎಂದು ಮಾಡಿಲ್ಲ. ರೈತ ಸಂಘಟನೆಯನ್ನು ಒಡೆಯುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆಂದು ಮಾನ್ಯ ಸದಸ್ಯರಾದ ಬಂಗಾರಪ್ಪನವರು ಆರೋಪ ಕೂಡ ಮಾಡಿದರು. ನಾನು ಏಕೆ ಅದನ್ನು ಒಡೆಯಲಿಕ್ಕೆ ಪ್ರಯತ್ನ ಮಾಡೋಣ ? ಮಾನ್ಯ ಬಂಗಾರಪ್ಪನವರಿಗೆ ನೆನಪು ಇರಬೇಕು, ಮಾನ್ಯ ಸದಸ್ಯರಾದ ಯಾವಗಲ್ ಆಪರು ಮತ್ತಿತರರು ಇದು ಹೇಗೆ ಒಡೆಯಿತು, ಯಾರು ಒಡೆದರು ಅವರ ಹೆಸರನ್ನೂ ಕೂಡ ಅವರು ಹೇಳಿದರು. ಈಗ ನಾನು ಅವರಿಗೆ ಒಂದು ಮಾತನ್ನು ಕೇಳುತ್ತೇನೆ. ಈಗ ರಾಜ್ಯದಲ್ಲಿ ನಾಲ್ಕೈದು ರೈತರ ಸಂಘಗಳು ಇದ್ದು ಇವರೆಲ್ಲರ ಜೊತೆಯಲ್ಲಿಯೂ ನಾವು ಮಾತುಕತೆಯನ್ನು ಮಾಡಿದ್ದೇವೆ. ಇವರೆಲ್ಲರೂ ಸರ್ಕಾರ ರೈತರ ಬಗ್ಗೆ ಸಹಾನುಭೂತಿ, ಸಹಕಾರ ನೀತಿಯನ್ನು ಹೊಂದಿದೆ, ಸರ್ಕಾರ ಅನ್ಯಾಯ ಮಾಡುವುದಿಲ್ಲ ಎನ್ನುವ ಭರವಸೆಯನ್ನು ಹೊಂದಿರುವಾಗ ಏಕೆ ಈ ಒಂದು ರೈತ ಸಂಘದ ವರು ಮಾತ್ರ ಚಳುವಳಿಯನ್ನು ಮಾಡಬೇಕು? ಇದರ ಹಿನ್ನೆಲೆ ಏನು ಇರಬಹುದು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಮಾನ್ಯ ಸದಸ್ಯರು ಇದನ್ನು ಯೋಚನೆ ಮಾಡಬೇಕು. ರೈತರ ಸಂಘಟನೆಯನ್ನು ಮುರಿದವರು ನಾವಲ್ಲ, ರೈತರ ಸಂಘ ಇದ್ದರೆ ಒಳ್ಳೆಯದು. ನಾನು ಒಂದು ತಪ್ಪನ್ನು ಮಾಡಿದೆ, ರೈತ ಸಂಘದವರನ್ನು ಇನ್ನು ಪ್ರತ್ಯೇಕವಾಗಿ ಕರೆಯುವುದಿಲ್ಲ, ಅವರೆಲ್ಲರನ್ನು ಒಟ್ಟಿಗೆ ಕರೆಯುತ್ತೇನೆ, ರೈತರ ಹಿತಾಸಕ್ತಿ ಎಲ್ಲರಿಗೂ ಸಂಭಂಧಪಟ್ಟಿದ್ದು. ಆದ್ದರಿಂದ ನಾನು ಈ ಸದನವನ್ನು ದುರುಪಯೋಗ ಮಾಡಿಕೊಂಡಿದ್ದೇನೆಂದು ಹೇಳುವುದು ಸತ್ಯವಲ್ಲ. ನಾನು ಏನನ್ನು ಹೇಳಬೇಕೋ ಅದನ್ನು ಇಲ್ಲಿ ಹೇಳುತ್ತೇನೆ, ಅವರ ಎದುರಿಗೆ ಹೇಳುತ್ತೇನೆ. ನಾವು ರೈತರ ಕಾನಫರೆನ್ಸ್ ಕರೆದದ್ದಾರೊ ಏಕೆ ? ಮಾನ್ಯ ಮೊಯಿಲಿಯವರು ನಾವು ರೈತರನ್ನು ಭೇಟಿ ಮಾಡಲು ಸೌಜನ್ಯಥೆಯನ್ನು ತೋರಿಸಲಿಲ್ಲ ಎಂದು ಹೇಳಿದರು, ನಾನು ಜ್ವರ ಬಂದು ಮಲಗಿದ್ದು. ಆಗ ಮಾನ್ಯ ಸದಸ್ಯರಾದ ಬಂಡೀ ಸಿದ್ದೇಗೌಡರು, ಮಲ್ಲಪ್ಪನವರು, ದೊಡ್ಡ ಬೋರೆಗೌಡರು ನನ್ನ ಹಾಸಿಗೆಯ ಹತ್ತಿರವೇ ಬಂದು ಮಾತನಾಡುತ್ತಾ ಏನಾದರೂ ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿದರು. ಆದರೆ ಈವರುಗಳು ಇದಕ್ಕೆ ಪರಿಹಾರವನ್ನು ಇವತ್ತೇ ಮಾಡಬೇಕು, ಈಗಲೇ ಮಾಡಬೇಕು ಎಂದು ಹೇಳಿದರೆ ಹೇಗೆ ? ನಾವು ಅವರ ಹಿತವನ್ನು ಕಾಪಾಡುತ್ತೇವೆಂದು ಹೇಳಿದ್ದಾಗಿದೆ. ಆದರೂ ಅವರು ಈ ರೀತಿಯ ಧೋರಣೆಯನ್ನು ತೆಗೆದುಕೊಂಡರೆ ನಾವು ಮಾಡತಕ್ಕದ್ದು ಏನು ? ಸಕ್ಕರೆಯ ವಿಷಯ ಇದೆ, ಇದನ್ನು ರೈತ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಪರಿಹಾರ ಮಾಡುತ್ತಾರೆಯೇ ಎಂದು ನಾನು ಕೇಳುತ್ತೇನೆ. ಶೇಕಡ ೮೮ರಿಂದ ಪರ್ಸೆಂಟ್ ಇಳುವರಿ ಬರತಕ್ಕ ಕಬ್ಬಿಗೆ ೧೮೦ ರೂಪಾಯಿಗಳನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಇದರ ಹೊರತಾಗಿ ಪರ್ಚೆಸ್ ಟ್ಯಾಕ್ಸ್‌ನಲ್ಲಿ ನಾವು ಅವರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ೧೨ ರೂಪಾಯಿಗಳಷ್ಟು ಪರಿಹಾರವನ್ನು ನಾವು ಕೊಟ್ಟಿದ್ದೇವೆ. ಈಗ ಕೇಂದ್ರಸರ್ಕಾರದಿಂದ ಬಂದಿದೆ, ನೀವು ಯಾವ ಅಧಿಕಾರದಿಂದ ೧೮೦ ರೂಪಾಯಿಗಳನ್ನು ನಿಗಧಿ ಮಾಡಿದ್ದೀರಿ ಎಂದು, ಯಾವ ಕಾನೂನಿನಿಂದ ಇದನ್ನು ಗೊತ್ತು ಮಾಡಿದ್ದೀರಿ ಎಂದು ನಮ್ಮ ಮೇಲೆ ಆಕ್ಷೇಪಣೆಯನ್ನು ತೆಗೆದುಕೊಂಡಿದ್ದಾರೆ ನಾವು ಅವರಿಗೆ ಉತ್ತರವನ್ನು ಏನು ಕೊಡಬೇಕು ? ಕಾನ್ಸ್‌ಟಿಟ್ಯೂಷನ್ ಪ್ರಕಾರ ಸ್ಯಾಚುಟರಿ ಪವರ್ ವಿನಿಮಂ ಪ್ರೈಸ್ ಫಿಕ್ಸ್ ಮಾಡಲಿಕ್ಕೆ ಕೇವಲ ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರ ಇರುವುದು. ಮಾನ್ಯ ಸದಸ್ಯರಾದ ದೊಡ್ಡ ಬೋರೆಗೌಡರು ಬಂಡೀ ಸಿದ್ದೇಗೌಡರು ಮತ್ತು ಮಲ್ಲಿಪ್ಪನವರು ಬಂದಾಗ ನಾನು ಇದನ್ನೇ ಹೇಳಿದೆ. ನಾವು ಒಂದು ಟನ್ ಕಬ್ಬಿಗೆ ೧೮೦ ರೂಪಾಯಿಗಳನ್ನು

ಗೊತ್ತು ಮಾಡಿದರೆ ಅದಕ್ಕೇನಾದರೂ ಅರ್ಥ ಇರಬಹುದು, ಒಂದು ಸಾರಿ ದರವನ್ನು ಗೊತ್ತು ಮಾಡಿದ ಮೇಲೆ ಅದನ್ನು ಜಾರಿಯಲ್ಲಿ ತರತಕ್ಕದ್ದು ನಮ್ಮ ಕೈಯಲ್ಲಿದ್ದರೆ ಅದಕ್ಕೆ ಅರ್ಥ ಇರುತ್ತದೆ. ನಾವು ಯಾರಿಗೆ ಮೋಸ ಮಾಡಲಿಕ್ಕೆ ಇದನ್ನು ಮಾಡುತ್ತಿದ್ದೇವೆ ? ಶಿವಮೊಗ್ಗದಲ್ಲಿ ಈ ದರವನ್ನು ಕೊಡುವುದಿಲ್ಲ ಎಂದು ಹಟಮಾಡಿದರು. ನಮ್ಮ ದೇಶದಲ್ಲಿ ಇದರ ಹಿಂದಿನ ಬಾಕಿ ಸುಮಾರು ೩೫೦–೩೬೦ ಕೋಟಿ ರೂಪಾಯಿಗಳಷ್ಟು ಇದೆ. ಇದರ ಬಗ್ಗೆ ಮಾತುಕತೆ ನಡೆಯಬೇಕಾದರೆ ರೈತರಿಗೆ ಮೂರುವರೆಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಉತ್ಪಾದನೆಯಾದ ಸಕ್ಕರೆ ಖರ್ಚು ಆಗುತ್ತಿಲ್ಲ. ಕೇಂದ್ರ ಸರ್ಕಾರದವರು ಹೊರಗಡೆಯಿಂದ ಸಕ್ಕರೆಯನ್ನು ತರಿಸುತ್ತಿದ್ದಾರೆ, ನಾವು ಶ್ರೀ ರಾವ್ ಬೀರೇಂದ್ರಸಿಂಗ್‌ರವರಿಗೆ ಒಂದು ಪತ್ರವನ್ನು ಬರೆದು ತಾವು ದಯವಿಟ್ಟು ಕೂಡಲೇ ಒಂದು ವಿಾಟಿಂಗನ್ನು ಕರೆಯಿರಿ. ಈ ಬಗ್ಗೆ ಸಂಬಂಧಪಟ್ಟ ಇಂಡಸ್ಟ್ರೀಸ್ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್ ಹಾಗೂ ಲೇಬರ್ ಮಿನಿಸ್ಟರ್‌ನ್ನು ಸೇರಿಸಿ, ಧರವನ್ನು ಗೊತ್ತು ಮಾಡೋಣ ಎಂದು ಹೇಳಿದರೆ ಅವರಿಗೆ ಇದು ಅರ್ಥವಾಗಲಿಲ್ಲ. ಇದರ ಬಗ್ಗೆ ಬೇಕಾದರೆ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಚರ್ಚೆ ಮಾಡೋಣ ಎಂದು ಹೇಳಿದ್ದೆ. ಅದಕ್ಕೆ ಅವರು ಇಂತಹ ವಿಾಟಿಂಗ್ ಕರೆಯುವ ಪದ್ಧತಿ ನಮ್ಮಲ್ಲಿಲ್ಲ. ಪ್ರಧಾನಮಂತ್ರಿಗಳೇ ಇಂತಹ ವಿಾಟಿಂಗನ್ನು ಕರೆಯಬೇಕು ಎಂದು ಹೇಳಿದರು. ನಾನು ಇದರ ಮೇಲೆ ಅವರಿಗೂ ಪತ್ರ ಬರೆದೆ. ಅದರ ಕೊನೆಯ ಭಾಗವನ್ನು ಮಾತ್ರ ಇಲ್ಲಿ ಓದುತ್ತೇನೆ. The issues before discussion, if I sum up, are

1) In view of the heavy stocks of sugar should we continue the levy system ? if yes, should we reduce the share of levy sugar in the total production?

2) If levy sugar is to continue, should the unlifted sugar be allowed for open market sale ?

3) Can this industry be declased as a food industry and so made eligible for financial interest at 12 per cent interest rate rather than 16 per cent as at present ?

4) Would it be possible for the Government of India to provide adequate incentives to encourage export of sugar outside the country in view of the cost of production being higher than the international price ?

5) Would it be possible for the Government of India to reduce the excise duty on sugar for the next two years ?

ಈ ಒಂದು ಇಷ್ಯವನ್ನು ಚರ್ಚೆ ಮಾಡುವುದಕ್ಕೆ ೫ ಜನ ಮಂತ್ರಿಗಳ ಸಭೆಯನ್ನು ಕರೆಯಿರಿ ಎಂದು ಬರೆದಿದ್ದೇನೆ. ಎಕ್ಸೈಜ್ ಡ್ಯೂಟಿ ಕಡಿಮೆ ಮಾಡುವುದಿಲ್ಲ. ಲೆವಿ ಷುಗರ್ ಯಾವುದನ್ನು ಇಟ್ಟು ಕೊಂಡರೂ ಅಷ್ಟೆ. ಓಪನ್ ಮಾರ್ಕೆಟ್ಟಿನಲ್ಲಾದರೂ ಪ್ರೈಸ್ ಹೆಚ್ಚು ಮಾಡಿದರೆ, ಕನಿಷ್ಟಪಕ್ಷ ಸ್ವಾಟಿಕಾ ಆದರೂ ಹೋಗುತ್ತೆ. ಇವತ್ತು ಸಹಕಾರಿ ಕ್ಷೇತ್ರದಲ್ಲಿರತಕ್ಕ ಮಂಡ್ಯ ಸಕ್ಕರೆ ಕಾರ್ಖಾನೆ ಒಂದು ಕೋಟಿ ರೂಪಾಯಿ ನಷ್ಟ ಅನುಭವಿಸಿದೆ, ಏನು ಮಾಡಬೇಕು ? ನಾವು ೧೮೦–೧೯೦ ರೂಪಾಯಿ ಕೊಟ್ಟರೂ ಯಾವ ಉಪಯೋಗವೂ ಆಗುವಂತಿಲ್ಲ. ಅಲ್ಲಿಂದ ಉತ್ತರ ಏನು ಬಂದಿದೆ ಅಂದರೆ, I will read the letter received from Sri Bhagwat Jha Azad :

I have had the issues raised by you very carefully examined and I would like to record the following comments on them :

(i) The requirement of levy sugar is steadily going up and with a large number of new sugar factories coming up, they will have to be given additional quantities of free sale sugar under

the incentive scheme. Consumers once accustomed to a certain level of levy sugar resist its redudtion very much. Sugar production is also subjected to vageries of weather as well as the cyclic fluctutations. It would thus be dangerous to reduce the existing ratios. Side by side, in a year of glut it is more importan to continue the dual pricing system as experience has shown the disastrous conseauences of de-control in a glut period in the past ;

(ii) Permitting levy sugar for being sold in the free market would tempt producers to deliberately not supply the sugar and subsequently claim the right to sell the same in free sale. This would not only create artificial scarcity but could also adversely affect the delicate market balance in the market besides being in complete violation of the existing dual pricing system which is derived from the Essential Commodities Act ;

(iii) Ministry of Finance and the Reserve Bank of India have categorically indicated that sugar industry will not be considered at par with the food industry ; ಕನಿಷ್ಟ ಅದನ್ನು ಮಾಡಿದ್ದಾರೆ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಆರ್ಥಿಕ ಪರಿವರ್ತನೆಯ ಒಂದು ಮುಖವನ್ನು ಸದನದ ಮುಂದಿಟ್ಟು ಇನ್ನೊಂದು ಮುಖವನ್ನು ಅಡಗಿಸತಕ್ಕ ಪ್ರವೃತ್ತಿ ಸರಿಯಲ್ಲ. ರಾಜ್ಯದಲ್ಲಿರುವ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗ ತಿಳಿದುಕೊಳ್ಳಿ. ಅವನ್ನು ಬಿಟ್ಟು ರಸ್ತೆ ರೋಕೋ ಚಳುವಳಿ ಮುಂದುವರಿಸಿ ಎಂದು ಹೇಳತಕ್ಕಂಥ ಪ್ರಚೋದನೆ ಮಾಡುತ್ತಿದ್ದೀರಿ. ರೈತರನ್ನು ಸಮಾಜಾಯಿಸಿ ಮಾಡಿ, ಅವರ ಸಮಸ್ಯೆಗಳನ್ನು ಪರಿಹರಿಸತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ...

ಶ್ರೀ ರಾಮಕೃಷ್ಣ ಹೆಗಡೆ.—ನಾನು ಯೀಲ್ಡಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರಚಲಿತ ಸಮಸ್ಯೆಗಳನ್ನು ಎದುರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡದೇ ಒಂದು ಮುಖವನ್ನು ಮಾತ್ರ ಇಟ್ಟುಕೊಂಡು ಸದನವನ್ನು ತಪ್ಪುದಾರಿಯಲ್ಲಿ ಎಳೆಯತಕ್ಕ...

ಶ್ರೀ ರಾಮಕೃಷ್ಣ ಹೆಗಡೆ.—ನಾನು ಯೀಲ್ಡಾಗಿಲ್ಲ. ನಾನು ತಪ್ಪು ದಾರಿಯಲ್ಲೂ ಇಲ್ಲ. ಒಪ್ಪುದಾರಿಯಲ್ಲೂ ಇಲ್ಲ. ಈ ಸಂದರ್ಭದಲ್ಲಿ ಇದನ್ನು ಹೇಳತಕ್ಕ ಅಗತ್ಯ ಏತಕ್ಕೆ ಆಯಿತೆಂದರೆ, ನಾವು ರೈತರ ಹಿತ ರಕ್ಷಣೆ ಮಾಡುವುದಕ್ಕೋಸ್ಕರ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರದ ಮುಂದೆ ಇರತಕ್ಕ ಎಲ್ಲಾ ಸಮಸ್ಯೆಗಳನ್ನು ಇಟ್ಟರೂ ಪಡೆದುಕೊಳ್ಳುವುದರಲ್ಲಿ ನಾವು ಯಶಸ್ವಿಯಾಗಿಲ್ಲ, ನಮ್ಮ ದುರ್ದೈವವೋ ಏನೋ ಗೊತ್ತಿಲ್ಲ, ನಾವು ಏನು ಮಾತನಾಡಿದರೂ ಕೇಂದ್ರದ ವಿರುದ್ಧ ಮಾತನಾಡುತ್ತೇವೆಂದು ತಿಳಿದುಕೊಳ್ಳುತ್ತಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮಗೆ ಸಾಮಾಜಿಕ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಮನಸ್ಸು ಇಲ್ಲ, ಬರೀ ರಾಜಕೀಯದ ಬಗ್ಗೆ ಮಾತನಾಡುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ವಿಷಯ ಹೇಳುವುದಕ್ಕೆ ಬಿಡಿ, ಪತ್ರದ ಪರಿಣಾಮವಾಗಿ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದನ್ನಾದರೂ ಹೇಳುವುದಕ್ಕೆ ಅವಕಾಶ ಕೊಡಿ.

(iv) Exports of sugar are controlled under the Interanational Sugar Agreement and India cannot exceed the share allocated to under the said Agreement. The exports of Sugar are canalised through the State Trading Corporation and, in view of this policy decision, it does not seem feasible to permit exports of sugar on OGL :

(v) The Ministry of Finance, on our persuasion, has already reduced the Excise Duty to Rs. 50/- per quintal on free sale sugar from about Rs. 82/- per quintal in 1980 and any further reduction may not be feasible as the whole question is linked with reising revenue by the Government of India, and.....

ನಾನು ಪತ್ರ ಬರೆದ ಮೇಲೆ ಎಕ್ಸೈಜ್ ಡ್ಯೂಟಿಯನ್ನು ಕ್ವಿಂಟಾಲ್‌ಗೆ ರೂ. ೮೨ ಇದ್ದದನ್ನು ರೂ. ೫೦ಕ್ಕೆ ಇಳಿಸಿದ್ದಾರೆ. ಈಗ ಸ್ವಲ್ಪ ಮಟ್ಟಿಗೆ ಪರಿಸ್ಥಿತಿ ಸುಧಾರಿಸಿದೆ.

(ಗೊಂದಲ)

ಶ್ರೀ ಎಂ. ಮಹದೇವ್.—ಸ್ವಾಮಿ, ಸಭೆಯ ಗಮನವನ್ನು ಬೇರೆ ಕಡೆ ತೆಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಕೇಂದ್ರದ ನೀತಿ ಮೇಲೆ ನಾಳೆ ಒಂದು ದಿಬೇಟ್ ಇದೆ.

ಶ್ರೀ ಎಸ್.ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಯವರು ಬಹಳ ಚೆನ್ನಾಗಿ ಉತ್ತರ ಕೊಡುತ್ತಿದ್ದಾರೆ. ನಾಳೆಗೆ ಮುಂದುವರಿಸಿ. ನಾಳೆ ಬೇಕಾದರೆ, ೫೦ ನಿಮಿಷ ತೆಗೆದುಕೊಂಡು ಮಾತಾನಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಇನ್ನು ೫ ನಿಮಿಷದ ಮೇಲೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಬೇರೆ ವಿಚಾರಗಳು ಇವೆ.

ಅಧ್ಯಕ್ಷರು.—ತಾವು ಹೇಳಿದ್ದಕ್ಕೆ ಉತ್ತರ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದು ಉತ್ತರ ಅಲ್ಲ. ವ್ಯಾಖ್ಯಾನ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಹತ್ತಿರ ಕೂಡ ಅನೇಕ ವಿಚಾರಗಳು ಇವೆ, ನಾಳೆಗೆ ಮುಂದುವರಿಸಿ.

ಅಧ್ಯಕ್ಷರು.—ಇನ್ನು ೫ ನಿಮಿಷದಲ್ಲಿ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಇಷ್ಟು ಹೊತ್ತು ಕೂತಿದ್ದೀರಿ, ಇನ್ನೊಂದು ೫ ನಿಮಿಷ ಕೂತುಕೊಳ್ಳಿ.

ಶ್ರೀ ಎಂ. ಮಹದೇವ್.—ನಾಳೆ ಮುಂದುವರಿಸಿ ಸ್ವಾಮಿ, ೪ ಗಂಟೆ ಬೇಕಾದರೆ ಮಾತನಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಚುನಾವಣೆ ಹೊತ್ತಿನಲ್ಲಿ ಯಾವ ರೈತ ಸಂಘ ಯಾವ ನೀತಿಯನ್ನು ಅನುಸರಿಸಿತು ಎನ್ನುವುದು ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಇಷ್ಟು ಉದ್ದದ ಹೇಳಿಕೆ ಕೊಡುವಂತಿದ್ದರೆ, ಮೊದಲೇ ಏತಕ್ಕೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಟ್ಟಿರಿ, This is not a correct procedure.....

ಅಧ್ಯಕ್ಷರು.—ತಾವುಗಳು ಹೊಸ ವಿಚಾರಗಳನ್ನು ಹೇಳಿದ್ದಕ್ಕೋಸ್ಕರ ಉತ್ತರ ಹೇಳುತ್ತಿದ್ದಾರೆ. ತಾವು ಕೂಡ ಒಂದು ಗಂಟೆ ಮಾತನಾಡಿದ್ದೀರಿ. ನಿಮ್ಮ ಪ್ರಶ್ನೆ ನಮಗೆ ಅರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಸ್ವಾಮಿ, ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೊರಗಡೆ ನಡೆಯತಕ್ಕಂಥ ಚಳುವಳಿಯನ್ನು ನಿಲ್ಲಿಸುವುದನ್ನು ಬಿಟ್ಟು ಬರೀ ಭಾಷಣ ಮಾಡುತ್ತಾ ಹೋದರೆ ಹೇಗೆ? ಸಮಸ್ಯೆಗಳನ್ನು ಬಿಡಿಸುವ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡದೇ ಬರೀ ವ್ಯಾಖ್ಯಾನ ಮಾಡುತ್ತಾಹೋದರೆ ಪರಿಹಾರ ಆಗುವುದಿಲ್ಲ.

SRI J. D. SOMAPPA.—Sir, I have received an information from the Home Department according to which, there is no place in almost all the jails in the State. But, the Chief Minister says, only 123 people have been arrested.

ಅಧ್ಯಕ್ಷರು.—ನಿಮ್ಮದು ಯಾವ ಪೋಲೀಸ್ ಇಲಾಖೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಜೈಲಿನಲ್ಲಿ ಎಲ್ಲಾ ಭರ್ತಿಯಾಗಿ ರೈತರನ್ನು ಕರೆದುಕೊಂಡು ಹೋಗಿ ಪಾವಗಡದ ಗುಡ್ಡದ ಹತ್ತಿರ ಬಿಟ್ಟು ಬರುತ್ತಿದ್ದಾರೆ. ಅರೆಸ್ಟ್ ಮಾಡಿರತಕ್ಕದ್ದು ೧೨೩ ಜನರು ಎಂದು ಹೇಳುತ್ತಿದ್ದಾರೆ. ಈ ಸರ್ಕಾರದವರು ಮಾಡತಕ್ಕ ರಾಜಕೀಯ ಎಲ್ಲಾ ಗೊತ್ತಿದೆ.

ಅಧ್ಯಕ್ಷರು.—ದಯವಾಡಿ ಕುಳಿತುಕೊಳ್ಳಿ. Order please. Please be seated in your seats.

(ಗೊಂದಲ)

ಶ್ರೀ ಜೆ.ಡಿ. ಸೋಮಪ್ಪ.—ನಾಳೆ ಮುಂದುವರಿಸಬಹುದು.

ಶ್ರೀ ರಾಮಕೃಷ್ಣ ಹೆಗಡೆ —ಇದು ಬಹಳ ವಿಚಿತ್ರ ವಾದ, ಇದರ ಬಗ್ಗೆ ಗಂಟೆಗಟ್ಟಲೆ ಚರ್ಚೆ ಯಾದಾಗ ಅದಕ್ಕೆ ಸೂಕ್ತವಾಗಿ ಉತ್ತರ ಕೊಡುವುದು ಬೇಡವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಲೋಕಾಭಿರಾಮವಾಗಿ ಮಾತನಾಡಿದರೆ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಧ್ಯ ಮಧ್ಯದಲ್ಲಿ ಬಾಯಿ ಹಾಕಿದರೆ ಹೇಗೆ ? ಮಾನ್ಯ ಅಧ್ಯಕ್ಷರೇ ನನಗೆ ಐದು ನಿಮಿಷ ಕೊಡಿ, ನಾನು ಬಹಳ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಹದೇವ್.—ನಾಳೆಗೆ ನಿಮ್ಮ ಭಾಷಣ ಮುಂದುವರಿಸಿ ನಾವು ಆಗ ಕೆಲವು ಪ್ರಶ್ನೆಗಳನ್ನು ಸಹ ಕೇಳಬಹುದು.

(ಗಲಾಟೆ)

SRI S. BANGARAPPA.—Be careful. What right the Chief Minister has got to threaten an hon. Member of this House?

ಗಲಾಟೆ–ಗೊಂದಲ

SRI RAMAKRISHNA HEGDE.—He cannot shout and threatan me like this.

SRI S. BANGARAPPA.—I have not threatened. But, you must mind your business.

SRI RAMAKRISHNA HEGDE.—By shouting, nobody will...

SRI S. BANGARAPPA.—Mr. Speaker Sir, you have allowed him to say all these things. This is very bad.

MR. SPEAKER.—I know what to allow and what not to allow There is some limit for all these things. I am not guided by anybody.

(INTERRUPTIONS)

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿ ಒದರಿದರೆ ಏನೂ ಆಗುವುದಿಲ್ಲ.

MR. SPEAKER.—I request you all to sit in your seats.

(INTERRUPTIONS)

MR. SPEAKER.—The discussion is closed and now, Sri Byrappaji will present petitions.

(ಗಲಾಟೆ)

ಅಧ್ಯಕ್ಷರು.—ದಯವಿಟ್ಟು ಎಲ್ಲಾರೂ ಕುಳಿತುಕೊಳ್ಳಿ. ಹೀಗಾದರೆ ಸಭೆಯನ್ನು ನಡೆಸುವುದು ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಕೊನೆಯದಾಗಿ ಇಷ್ಟನ್ನು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ ಜೈಲಿನಲ್ಲಿರತಕ್ಕ ರೈತರ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರು, ಆ ರೀತಿಯಾಗಿ ಏನೂ ತೊಂದರೆಯಾಗಿಲ್ಲ. ಒಂದೇ ಸಾರಿ ಇಷ್ಟೆಲ್ಲಾ ಸಂಖ್ಯೆಯಲ್ಲಿ ಬಂದರೆ ಆಗ ಆಲ್ಲಿ ವ್ಯವಸ್ಥೆ ಮಾಡಲಿಕ್ಕೆ ಕಷ್ಟವಾಗುತ್ತದೆ. ನಾವು ಅವರಿಗೆಲ್ಲಾ ಅನಾನುಕೂಲ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಮತ್ತೆ ದಮನ ನೀತಿಯ ವಿಚಾರ ಪ್ರಸ್ತಾಪ ಮಾಡುತ್ತಾ ಹೇಳಿದರು, ಸರ್ಕಾರ ದಮನ ನೀತಿಯನ್ನು ಅನುಸರಿಸುತ್ತಿದೆ ಎಂದು. ಆದರೆ ನಾವು ದಮನ ನೀತಿಯನ್ನು ಅನುಸರಿಸುತ್ತಿಲ್ಲ. ಅದು ಈ ಸರ್ಕಾರದ ಸಂಸ್ಕೃತಿಯೂ ಅಲ್ಲ. ಯಾವ ರೈತರು ಅಡ್ಡದಾರಿಗೆ ಹೋಗುತ್ತಿದ್ದಾರೆ, ಆ ರೈತ ಮುಖಂಡರಲ್ಲಿ ನಾವು ಪುನಃ ವಿನಯದಿಂದ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ ಇದರಿಂದ ರೈತರ ಸಮೂಹಕ್ಕೆ ಮತ್ತು ರೈತರಿಗೆ ಅನಾನುಕೂಲವಾಗುತ್ತದೆ. ಇವತ್ತು ಏನು ದುರ್ಘಟನೆ ನಡೆಯಿತು ಈ ದುರ್ಘಟನೆ ಇನ್ನು ಮುಂದೆ ನಡೆಯ ಕೂಡದು ಅದು ಅಷ್ಟಕ್ಕೆ ನಿಲ್ಲಬೇಕು ಏನಾದರೂ ಇಂಥಹ ದುರ್ಘಟನೆ ಮುಂದುವರೆದರೆ ಅದಕ್ಕೆ ಸರಿಯಾದಂಥ ಒಂದು ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇದರ ಹಿಂದೆ ಯಾರಿದ್ದಾರೆ ಅವರ ವಿರುದ್ಧ ಸಹ ಕ್ರಮವನ್ನು ತಗೆದುಕೊಳ್ಳಬೇಕಾಗುತ್ತದೆ. ಕೊನೆಯದಾಗಿ ಇಷ್ಟು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸಂಘದವರ ನೀತಿ ಏನು ಇದೆ ಎಂದರೆ ಆದು ಹಸುವಿನ ಕೆಚ್ಚಲನ್ನೇ ಕತ್ತರಿಸತಕ್ಕ ನೀತಿಯೆಇ ಎಂದು ಬಹಳ ವಿನಯದಿಂದ ಹೇಳಲು ಬಯಸುತ್ತೇನೆ. ಈ ಸರ್ಕಾರ ನಿಮ್ಮ ಸರ್ಕಾರ. ನಿಮ್ಮ ಹಿತರಕ್ಷಣೆ ಮಾಡತಕ್ಕಂಥ ಸರ್ಕಾರವಾಗಿದೆ. ರೈತರ ಹಿತಕ್ಕೆ ವಿರುದ್ಧವಾಗಿ ಎಂದೂ ಯಾವ ಕೆಲಸವನ್ನು ಮಾಡುವುದಿಲ್ಲ ಮತ್ತು ಮಾಡುತ್ತಿಲ್ಲ ಮತ್ತು ಆ ನೀತಿಯನ್ನು ಆದೇ ರೀತಿಯಾಗಿ ಈ ಸರ್ಕಾರ ಒಂದು ಹಸು ಇದ್ದಹಾಗೆ ಈ ಹಸು ನಿಮ್ಮದೆಂದು ತಿಳಿದುಕೊಳ್ಳಿ, ಆದರ ಕೆಚ್ಚಲನ್ನು ಮಾತ್ರ ಕತ್ತರಿಸಬೇಡಿ. ದಿನ ಆದರ ಹಾಲನ್ನು ತೆಗೆದುಕೊಳ್ಳಿ, ಎಂದು ಇಷ್ಟು ಮಾತ್ರ ಆವರಿಗೆ ಹೇಳಬಯಸುತ್ತೇನೆ. ಕೊನೆಯದಾಗಿ ನಾನು ಅವರಲ್ಲಿ ಪುನಃ ಕೇಳಿಕೊಳ್ಳುತ್ತೇನೆ, ಚಳುವಳಿಯನ್ನು ನಿಲ್ಲಿಸಿ, ಮಾತುಕತೆಗೆ ಬನ್ನಿ, ಒಂದು ಅಭಿಪ್ರಾಯಕ್ಕೆ ಇಡೀ ಸದನ ಒಪ್ಪುತ್ತದೆಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಶ್ರೀ ಭೈರಪ್ಪಾಜಿಯವರೇ ನೀವು ಪಿಟಿಷನ್ ಪ್ರೆಸೆಂಟ್ ಮಾಡಿ.

ಶ್ರೀ ಎಂ. ಮಹದೇವ್.—ದಯವಿಟ್ಟು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ರೈತರ ವಿಚಾರ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)